ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17 | ಸಂಚಿಕೆ 53 | ರೂ. 2.00 | 31 ಡಿಸೆಂಬರ್ 1995

ಕಾಂಗ್ರೆಸ್(ಐ) ಅಸ್ತವ್ಯಸ್ತಗೊಂಡಿದೆ

ಕಾವೇರಿ ನ್ಯಾಯ ಮಂಡಳಿ ಆದೇಶ ಸರಿಯಲ್ಲ

ವಿವಿಧ ರಾಜ್ಯಗಳಲ್ಲಿ ಹರಿಯುತ್ತಿರುವ ನದಿಗಳ ನೀರಿನ ಹಂಚಿಕೆಯ ಕುರಿತು ಯಾವುದೇ ನ್ಯಾಯಮಂಡಳಿ ಅವಸರದ ಆದೇಶ ನೀಡಿರುವುದು ಎಂದಿಗೂ ಸರಿಯಲ್ಲ. ಆದರಿಂದ ಒಂದಲ್ಲ ಒಂದು ರಾಜ್ಯಕ್ಕೆ ಅನ್ಯಾಯವಾಗುವುದು ಸಹಜ. ಹಾಗೆಯೇ ಆ ರಾಜ್ಯದ ರೈತರಿಗೂ ಹಾನಿಯಾಗುವುದರಲ್ಲಿ ಸಂಶಯವಿಲ್ಲ. ಅಂತರ ರಾಜ್ಯ ನದಿಗಳ ಸುತ್ತಮುತ್ತ ಬೆಳೆಯತಕ್ಕ ದವಸ ಧಾನ್ಯ ಹಾಗೆಯೇ ಗರಿಷ್ಟ ಕ್ಷೇತ್ರದ ಕುರಿತು ಕೂಡಾ ಆಯಾ ಸರಕಾರಗಳಲ್ಲಿ ಸ್ಪಷ್ಟವಾದ ನಿಲುವು ಅಗತ್ಯ. ಈಗ ನೋಡಿದರೆ ಆ ನಿಲುಮೆಯನ್ನು ಯಾವ ರಾಜ್ಯವೂ ಅನುಸರಿಸುವಂತೆ ಕಂಡು ಬರುವುದಿಲ್ಲ. ಆ ಕಾರಣದಿಂದಲೇ ಕಾವೇರಿ ನದಿ ನೀರಿನ ಹಂಚಿಕೆ ಬಿಡುಗಡೆಯ ಕುರಿತು ಯಾವುದೇ ನಿರ್ದಿಷ್ಟವಾದ ಒಮ್ಮತಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಪ್ರತಿ ವರ್ಷ ಕರ್ನಾಟಕ-ತಮಿಳುನಾಡು ರಾಜ್ಯ ಸರಕಾರಗಳ ನಡುವೆ ಭಿನ್ನಾಭಿಪ್ರಾಯ, ವೈಮನಸ್ಸು ಬೆಳೆದು ಬರುತ್ತದೆ. ರೈತ ಸಮುದಾಯದಲ್ಲಿ ಅಸಂತುಷ್ಟಿ ಬೆಳೆದು ಹಲವು ರೀತಿಯ ಹೋರಾಟಗಳಿಗೆ ಎಡೆ ಮಾಡಿಕೊಡುತ್ತಿರುವುದನ್ನು ಕಾಣುತ್ತಿದ್ದೇವೆ. ರೈತರು ನಿರ್ದಿಷ್ಟ ಎಕರೆವಾರು ಕ್ಷೇತ್ರಗಳನ್ನು ಮೀರಿ ಆಹಾರ ಧಾನ್ಯ ಬೆಳೆಯುತ್ತಾರೆ. ಹೆಚ್ಚುವರಿ ಪ್ರದೇಶಕ್ಕೆ ನೀರು ಸಿಗಲಾರದಾದಾಗ ಸರಕಾರದ ಮೇಲೆ ಒತ್ತಡ ತರುತ್ತಾರೆ. ಚಳುವಳಿ ಹೂಡುತ್ತಾರೆ.

ಅಂತರ ರಾಜ್ಯ ನದಿ ನೀರಿಗೂ ಪ್ರತಿ ವರ್ಷ ಬೀಳುವ ಮಳೆಗೂ ಸಂಬಂಧವಿದೆ. ಸರಿಯಾಗಿ ಮಳೆ ಆಗದಿದ್ದರೆ ನದಿಯಲ್ಲಿ ನೀರು ಹರಿಯುವುದಿಲ್ಲ. ಆ ಕಾರಣದಿಂದಾಗಿ ನೀರಿನ ಅಭಾವವುಂಟಾಗುತ್ತದೆ. ಕೆಳಗಿನ ಪ್ರದೇಶಕ್ಕೆ ಆಗ ಸಾಕಷ್ಟು ನೀರು ಸಿಗುವುದಿಲ್ಲ. ಆಗ ಬೊಬ್ಬಾಟ ಪ್ರಾರಂಭವಾಗುತ್ತದೆ. ಒತ್ತಾಯ ಹೆಚ್ಚಾಗುತ್ತದೆ. ಆದರೆ ವಾಸ್ತವ ಪರಿಸ್ಥಿತಿಯನ್ನು ತಿಳಿದುಕೊಳ್ಳಲು ಯಾರೂ ಪ್ರಯತ್ನ ಮಾಡುವುದಿಲ್ಲ.

ಕಾವೇರಿ ನೀರಿನ ಸಮಸ್ಯೆ ಬಗೆ ಹರಿಯದಿರಲಿಕ್ಕೆ ಪ್ರತಿ ವರ್ಷ ತಮಿಳುನಾಡಿನಲ್ಲಿ ನೀರಿಗಾಗಿ ಒತ್ತಾಯ ಬರಲಿಕ್ಕೆ ಇದೇ ಮುಖ್ಯ ಕಾರಣ. ಕಾವೇರಿ ನೀರನ್ನು ಉಪಯೋಗಿಸುವ ಬೆಳೆ ಬೆಳೆಯುವ ಕ್ಷೇತ್ರ ಪ್ರತಿ ವರ್ಷ ಹೆಚ್ಚಾಗುತ್ತಿದೆ. ಅದೇ ಸಮಯದಲ್ಲಿ ಭೂಗತ ನೀರನ್ನು ಉಪಯೋಗಿಸುವ ಪ್ರಯತ್ನ ನಡೆದಿಲ್ಲ. ಹಾಗಾಗಿ ಮಳೆ ಪ್ರಾರಂಭವಾದ ಕೂಡಲೇ ಸಾಗುವಳಿ ಕೆಲಸ ಪ್ರಾರಂಭವಾಗುತ್ತದೆ. ಬಿತ್ತನೆ ನಡೆಯುತ್ತದೆ. ಬೆಳೆ ಬೆಳೆದು ನಿಲ್ಲುತ್ತದೆ. ಸರಿಯಾಗಿ ಮಳೆಯಾಗಿ ಕಾವೇರಿಯಲ್ಲಿ ಸಾಕಷ್ಟು ನೀರು ಹರಿಯದಿದ್ದರೆ ಬೆಳೆದು ನಿಂತ ಬೆಳೆಗೆ ನೀರು ಲಭ್ಯವಾಗುವುದಿಲ್ಲ. ಆಗ ಹಾಹಾಕಾರ ಪ್ರಾರಂಭವಾಗುತ್ತದೆ.

ಇದೇ ಕಾವೇರಿ ಕುರಿತು ತಮಿಳುನಾಡಿನ ಸಮಸ್ಯೆ. ಅಲ್ಲಿ ಬೆಳೆದು ನಿಂತ ಬೆಳೆ ಒಣಗುವ ಸಮಸ್ಯೆ.

- ಎನ್.ಕೆ. ಉಪಾಧ್ಯಾಯ

ಇಂಥ ಸಮಸ್ಯೆಗಳನ್ನು ಸಂಬಂಧಪಟ್ಟ ರಾಜ್ಯಗಳೊಡನೆ ಸಂಧಾನ ಸಮಾಲೋಚನೆ ಮೂಲಕ ಬಗೆಹರಿಸಲು ಕೇಂದ್ರ ಸರಕಾರ ಯತ್ನಿಸಬೇಕು. ಇಲ್ಲವಾದರೆ ಭಾಷಾಂಧ ಶಕ್ತಿಗಳು ಜನರ ಅಸಂತೃಪ್ತಿ, ಭಾವೋದ್ವೇಗಗಳನ್ನು ಕೆರಳಿಸಿ ಹಿಂಸಾಕೃತ್ಯದಲ್ಲಿ ತೊಡಗುವಂತೆ ಮಾಡಿ ಎರಡು ರಾಜ್ಯಗಳ ಜನರಲ್ಲಿ ದ್ವೇಷಭಾವನೆಯನ್ನು ಮೂಡಿಸಿ ಐಕ್ಯತೆಗೆ ಅಪಾಯ ತಂದೊಡ್ಡುತ್ತವೆ.

ಕೇಂದ್ರ ಸರಕಾರವಾಗಲೀ, ಎರಡು ರಾಜ್ಯಗಳ ಸರಕಾರಗಳಾಗಲೀ ಕಾವೇರಿ ನೀರಿನ ಸಮಸ್ಯೆಯನ್ನು ಸಮರ್ಪಕವಾಗಿ ಬಗೆಹರಿಸುವ ಯಾವ ಪ್ರಯತ್ನವನ್ನೂ ಮಾಡಿರುವುದಿಲ್ಲ. ಪ್ರತಿ ವರ್ಷ ತಮಿಳುನಾಡಿನ ಸರಕಾರ ಸುಪ್ರೀಂಕೋರ್ಟಿಗೋ, ಕಾವೇರಿ ನ್ಯಾಯಮಂಡಳಿಗೋ ಅರ್ಜಿಗಳನ್ನು ಸಲ್ಲಿಸುತ್ತಲೇ ಬಂದಿದೆ. ಪ್ರತಿ ವರ್ಷ ಕರ್ನಾಟಕದಲ್ಲಿ ಕಾವೇರಿ ನೀರಿನ ಹೆಸರಿನಲ್ಲಿ ಗಲಾಟೆಗಳು ನಡೆಯುತ್ತಲೇ ಇವೆ. ಕಾಂಗ್ರೆ-ಬಿಜೆಪಿಗಳು ಅದರ ಲಾಭ ಪಡೆಯುವ ಪ್ರಯತ್ನದಲ್ಲಿ ಹಿಂದೆ ಬಿದ್ದಿಲ್ಲ. ಕಾವೇರಿ ನ್ಯಾಯ ಮಂಡಳಿ 1991ರಲ್ಲಿ ಅಂತಿಮ ತೀರ್ಪು ಬರುವ ತನಕ ತಮಿಳುನಾಡಿಗೆ 205 ಟಿಎಂಸಿ ನೀರು ಬಿಡಬೇಕೆಂದು ಹೇಳಿರುವುದನ್ನು ಸಿಪಿಐ(ಎಂ) ವಿರೋಧಿಸಿತ್ತು. ತಮಿಳುನಾಡಿನ ರೈತರಿಗೆ ಹಾನಿಯಾಗದ ರೀತಿಯಲ್ಲಿ, ಕರ್ನಾಟಕದ ರೈತರ ಹಕ್ಕನ್ನು ರಕ್ಷಿಸುವ ರೀತಿಯಲ್ಲಿ ಸಮಸ್ಯೆ ಬಗೆಹರಿಸಬೇಕೆಂದು ಹೇಳಿತ್ತು. ಕೇಂದ್ರ ಸರಕಾರ ಮಧ್ಯಪ್ರವೇಶಿಸಿ ಪಂಚಾಯತಿ ಮಾಡಿ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕೆದು ಹೇಳಿತ್ತು.

ಈ ವರ್ಷ ತಮಿಳುನಾಡು ಸರಕಾರ ಕಾವೇರಿ ನ್ಯಾಯಮಂಡಳಿಗೆ ಮೊರೆ ಹೋಗದೆ ಸುಪ್ರೀಂಕೋರ್ಟಿಗೆ ಅರ್ಜಿ ಸಲ್ಲಿಸಿತ್ತು. ಸುಪ್ರೀಂ ಕೋರ್ಟು ಅವರ ಅರ್ಜಿಯನ್ನು ಕಾವೇರಿ ನ್ಯಾಯಮಂಡಳಿಗೆ ಕಳುಹಿಸಿ ಕೊಟ್ಟು ಕಾವೇರಿ ನದಿಯ ನೀರಿನ ಪ್ರಮಾಣ ಹಾಗೆಯೇ ತಮಿಳುನಾಡಿಗೆ ನೀರು ಬಿಡುಗಡೆ ಮಾಡುವ ಕುರಿತು ಉಸ್ತುವಾರಿ ನೋಡಿಕೊಳ್ಳಲು ತಜ್ಞರನ್ನೊಳಗೊಂಡ ಒಂದು ಶಾಶ್ವತ ಸಮಿತಿಯನ್ನು ರಚಿಸುವಂತೆ ಎರಡೂ ರಾಜ್ಯಗಳಿಗೆ ಸೂಚಿಸಿತ್ತು. ಆ ಸೂಚನೆಯಂತೆ ತಜ್ಞರ ಸಮಿತಿ ನೇಮಿಸಿ ಅವರ ಅಭಿಪ್ರಾಯಗಳನ್ನು ಪಡೆಯದೆ ಏಕಾಏಕಿಯಾಗಿ ಕರ್ನಾಟಕ ಸರಕಾರ ತಮಿಳುನಾಡಿಗೆ ಕಾವೇರಿಯಿಂದ 11 ಟಿಎಂಸಿ ನೀರು ಬಿಡಬೇಕೆಂದು ಆದೇಶ ನೀಡಿದೆ. ಕಾವೇರಿಯಲ್ಲಿ ಕರ್ನಾಟಕ ರೈತರ ಬೆಳೆಗೆ ಹಾಗೂ ಕುಡಿಯಲಿಕ್ಕೆ ಸಾಕಷ್ಟು ನೀರು ಇಲ್ಲದಿರುವಾಗ ಈ ರೀತಿ ಆದೇಶ ನೀಡಿರುವುದನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ತೀವ್ರ ಕಳವಳ ವ್ಯಕ್ತಪಡಿಸಿದೆ. ಸುಪ್ರೀಂ ಕೋರ್ಟಿನ ಇತ್ತೀಚಿಗಿನ ತೀರ್ಪು ಪ್ರಕಾರ ಕರ್ನಾಟಕ ಮತ್ತು ತಮಿಳುನಾಡು ಸರಕಾರಗಳು ಕೂಡಲೇ ತಜ್ಞರ ಸ್ಥಾಯಿ ಸಮಿತಿಯನ್ನು ರಚಿಸಬೇಕೆಂದೂ ಆ ಸಮಿತಿಯು ವಸ್ತುನಿಷ್ಟವಾಗಿ ತಾಂತ್ರಿಕ ಅಭಿಪ್ರಾಯವನ್ನು ಪಡೆದು ಈ ವಿಷಯದಲ್ಲಿ ಒಂದು ನಿರ್ಧಾರಕ್ಕೆ ಬರುವುದೇ ಎರಡೂ ರಾಜ್ಯಗಳ ರೈತರ ಹಿತದೃಷ್ಟಿಯಿಂದ ಮತ್ತು ಅವರ ಬೆಳೆಯನ್ನು ರಕ್ಷಿಸುವ ದೃಷ್ಟಿಯಿಂದ ಸೂಕ್ತವಾದ ಪರಿಹಾರವೆಂದೂ ಅಭಿಪ್ರಾಯಪಟ್ಟಿದೆ. ಎರಡೂ ಸರಕಾರಗಳೂ ಅಂತಹ ಸಮಿತಿಯನ್ನು ರಚಿಸಲು ಕೂಡಲೇ ಕ್ರಮ ವಹಿಸಬೇಕೆಂದೂ ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ. ಕಾವೇರಿ ನೀರಿನ ಸಮಸ್ಯೆಯಂಥ ಗಂಭೀರ ಪ್ರಶ್ನೆಯನ್ನು ರಾಜಕೀಯಕ್ಕೆ ಬಳಸಿಕೊಳ್ಳುವ ಕಾಂಗ್ರೆಸ್(ಐ) ಮತ್ತು ಬಿಜೆಪಿ ಪಕ್ಷಗಳನ್ನು ಖಂಡಿಸಬೇಕಾಗಿದೆ. ನೀರಿನ ಸಮಸ್ಯೆ ರಾಜಕೀಯಕ್ಕೆ ಬಳಸುವ ಸಮಸ್ಯೆಯಲ್ಲ, ಸೌಹಾರ್ದಯುತವಾಗಿ ಬಗೆಹರಿಸಲ್ಪಡುವ ಸಮಸ್ಯೆ ಎಂಬುದನ್ನು ಎಲ್ಲರೂ ಗಮನಿಸುವುದು ಅಗತ್ಯ.

ಜನಗಳ ತುರ್ತು ಸಮಸ್ಯೆಗಳ ಮೇಲೆ ವ್ಯಾಪಕ ಚಳುವಳಿ ನಡೆಸಿ

- ಪೊಲಿಟ್ ಬ್ಯೂರೋ ಕರೆ

ಕಾಂಗ್ರೆಸ್(ಐ) ತನ್ನ ಕೆಟ್ಟ ಆರ್ಥಿಕ ನೀತಿಗಳು, ಕೋಮುವಾದಿಗಳನ್ನು ಸಂತೃಪ್ತಗೊಳಿಸುವ ನಿಲುವು ಹಾಗೂ ವ್ಯಾಪಕ ಭ್ರಷ್ಟಾಚಾರದಿಂದಾಗಿ ಅಸ್ತವ್ಯಸ್ತಗೊಂಡಿದೆ. ಆದ್ದರಿಂದ ಜನವರಿ ತಿಂಗಳಲ್ಲಿ ಜನಗಳ ತುರ್ತು ಪ್ರಶ್ನೆಗಳ ಮೇಲೆ ಸಾಮೂಹಿಕ ಚಳುವಳಿ ನಡೆಸಬೇಕೆಂಬ ಕೇಂದ್ರ ಸಮಿತಿಯ ಕರೆಯನ್ನು ಶಕ್ತಿಯುತವಾಗಿ ಜಾರಿಗೆ ತರಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಕರೆ ನೀಡಿದೆ.

ನಿಲ್ಲದ ಬೆಲೆಯೇರಿಕೆ, ರೂಪಾಯಿಯ ಇಳಿಯುತ್ತಿರುವ ಮೌಲ್ಯ ಜನಗಳ ಜೀವನಮಟ್ಟವನ್ನು ಸತತವಾಗಿ ಹದಗೆಡಿಸುತ್ತಲೇ ಇದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಡಿಸೆಂಬರ್ 14-15ರಂದು ಸಭೆ ಸೇರಿದ ಪೊಲಿಟ್ ಬ್ಯೂರೋ ದೇಶದ ಪ್ರಸ್ತುತ ಪರಿಸ್ಥಿತಿಯ ಪರಾಮರ್ಶೆ ನಡೆಸಿತು.

ಆರ್ಥಿಕ ರಂಗದಲ್ಲಿ ಜನಗಳು ತೀವ್ರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸರಕಾರ ಹಣದುಬ್ಬರವನ್ನು ಹತೋಟಿಗೆ ತರಲಾಗಿದೆ ಎಂದು ಹೇಳಿಕೊಂಡರೂ ಕೃಷಿ ಕೂಲಿಕಾರರ ಬಳಕೆ ಹೇಳಿಕೊಂಡರೂ ಕೃಷಿ ಕೂಲಿಕಾರರ ಬಳಕೆ ಸೂಚ್ಯಂಕ ಜುಲೈ 1994ರಿಂದ ಆಗಸ್ಟ್ 1995ರ ನಡುವೆ 14.1% ರಷ್ಟು ಹೆಚ್ಚಿದೆ. ಒಂದು ಪರಿಣಾಮಕಾರಿ ಸಾರ್ವಜನಿಕ ವಿತರಣಾ ವ್ಯವಸ್ಥೆಯಿಲ್ಲದಿರುವುದರಿಂದ ಈ ಬೆಲೆಯೇರಿಕೆ ಬಡ ವಿಭಾಗಗಳನ್ನಂತೂ ತೀವ್ರವಾಗಿ ತಟ್ಟಿದೆ. ಜತೆಗೆ ಸಾರ್ವಜನಿಕ ಆರೋಗ್ಯ ಹಾಗೂ ಶಿಕ್ಷಣದ ತನ್ನ ಜವಾಬ್ದಾರಿಯಿಂದ ಸರಕಾರ ಹಿಂದೆ ಸರಿದಿರುವುದು ಜನಗಳ ಜೀವನವನ್ನು ಅಸಹನೀಯಗೊಳಿಸಿದೆ ಎಂದು ಪೊಲಿಟ್ ಬ್ಯೂರೋ ಹೇಳಿದೆ.

ರೂಪಾಯಿಯ ಮೌಲ್ಯ ಇಳಿಯುತ್ತಲೇ ಇರುವುದು ನಮ್ಮ ಆರ್ಥಿಕಕ್ಕೆ ಬಡಿದಿರುವ ಗಂಭೀರ ಸಮಸ್ಯೆಗಳ ಒಂದು ಸ್ಪಷ್ಟ ಸಂಕೇತ. ಸದ್ಯ ರಿಜರ್ವ್ ಬ್ಯಾಂಕ್ ಮಧ್ಯಪ್ರವೇಶಿಸಿ ರೂಪಾಯಿ ಬೆಲೆ ಇಳಿಯುವುದನ್ನು ತಡೆದಿದೆ. ಆದರೆ ಇದರಿಂದ ವಿದೇಶೀ ವಿನಿಮಯ ಸಂಗ್ರಹ ತೀವ್ರವಾಗಿ ಇಳಿಯುತ್ತಿದೆ. ವಿದೇಶೀ ಹಣದಲ್ಲಿ ಬಹುಪಾಲು ಸಟ್ಟಾ ವ್ಯವಹಾರಕ್ಕೆಂದು ಬಂದ 'ಬಿಸಿ ಹಣ'ವಾಗಿರುವುದರಿಂದ, ಆಮದಿನ ಖರ್ಚು ಹೆಚ್ಚುತ್ತಿರುವುದರಿಂದ ದೇಶ ಶೀಘ್ರದಲ್ಲೇ ಪಾವತಿ ಬಾಕಿ ಸಮಸ್ಯೆಯನ್ನು ಎದುರಿಸಬಹುದು ಎಂದಿರುವ ಪೊಲಿಟ್ ಬ್ಯೂರೋ ಈ ಸರಕಾರ ಸಾಲದ ಮೇಲೆ ಬದುಕುತ್ತಿದೆ, ಆಂತರಿಕ ಸಾಲದ ಹೊರೆ ಆತಂಕಕಾರಿಯಾಗಿ ಬೆಳೆದಿದೆ ಎಂದು ಎಚ್ಚರಿಸಿದೆ. ಸಾರ್ವಜನಿಕ ವಲಯದ ಉದ್ದಿಮೆಗಳ ಶೇರುಗಳನ್ನು ಮಾರಿ ಹಣಕಾಸು ಕೊರತೆ ತುಂಬುವ ಅನಿಷ್ಟಕಾರಿ ಧೋರಣೆ ಕೂಡಾ ವಿಫಲವಾಗಿದೆ, ಮಾರುಕಟ್ಟೆಯಿಂದ ಅದಕ್ಕೆ ಸ್ಪಂದನೆ ದೊರೆಯದಾಗಿದೆ ಎಂದು ಪೊಲಿಟ್ ಬ್ಯೂರೋ ಗಮನಿಸಿದೆ.

ಟೆಲಿಕಾಂ ಹಗರಣ

ವಿದ್ಯುತ್, ದೂರಸಂಪರ್ಕದಂತಹ ನಿರ್ಣಾಯಕ ವಲಯಗಳಲ್ಲಿ ಖಾಸಗೀಕರಣದ ಕಾಂಗ್ರೆಸ್ ಭರಾಟೆಯನ್ನು ಸಿಪಿಐ(ಎಂ) ಆರಂಭದಿಂದಲೂ ವಿರೋಧಿಸುತ್ತಾ ಬಂದಿದೆ. ಸರಕಾರದ ಟೆಲಿಕಾಂ ನೀತಿಯನ್ನು ವಿದೇಶೀ ಕಂಪನಿಗಳಿಗೆ ಅನುಕೂಲವಾಗುವಂತೆ ರೂಪಿಸಿದ್ದು ದೇಶದ ಭದ್ರತೆಯ ಬಗ್ಗೆ ಕಿಂಚಿತ್ತೂ ಯೋಚಿಸಿಲ್ಲ. ಇದು ಸುಲಿಗೆಕೋರತನಕ್ಕೆ, ರಾಜಕೀಯ ಭ್ರಷ್ಟಾಚಾರಕ್ಕೆ ಸಿಕ್ಕಿರುವ ವರದಾನ. ಮೂಲಭೂತ ಟೆಲಿಸಂಪರ್ಕ ಸೇವೆಗಳ ಟೆಂಡರುಗಳಲ್ಲಿನ ಮೋಸದ ಪ್ರಕ್ರಿಯೆಗೆ ಸಂಬಂದಪಟ್ಟಂತೆ ಸಂಸತ್ತಿನಲ್ಲಿ ನಡೆಸಿರುವ ಹೋರಾಟ ಇದಕ್ಕೊಂದು ಒಳ್ಳೆಯ ಉದಾಹರಣೆ ಎಂದು ಪೊಲಿಟ್ ಬ್ಯೂರೋ ಟೀಕಿಸಿದೆ. ಕೇಂದ್ರ ಮಂತ್ರಿ ಸುಖರಾಂ ಒಂದು ನಿರ್ದಿಷ್ಟ ಕಂಪೆನಿಗೆ ಪಕ್ಷಪಾತ ತೋರಿರುವುದು, ಟೆಂಡರಿನ ಮೇಲೆ ಮಿತಿ ಹಾಕಿದ ರೀತಿ ವ್ಯಾಪಕ ಪ್ರಮಾಣದ ಅನಿಯಮಿತತೆ ಹಾಗೂ ಭ್ರಷ್ಟಾಚಾರ ನಡೆದಿದೆಯೆಂದು ಸಂಶಯಪಡಲು ಸಾಕಷ್ಟು ಆಧಾರ ಒದಗಿಸಿದೆ ಎಂದಿರುವ ಪಿ.ಬಿ. ಸಾಕಷ್ಟು ಆಧಾರ ಒದಗಿಸಿದೆ ಎಂದಿರುವ ಪಿ.ಬಿ. ಇಡೀ ವಿಷಯದ ಬಗ್ಗೆ ತನಿಖೆ ನಡೆಸಲು ಜಂಟಿ ಸಂಸದೀಯ ಸಮಿತಿಯನ್ನು ರಚಿಸಬೇಕು, ಅದುವರೆಗೆ ಟೆಂಡರ್ ಪ್ರಕ್ರಿಯೆಯನ್ನು ಅಮಾನತ್ತಿನಲ್ಲಿಡಬೇಕು ಎಂಬ ವಿರೋಧ ಪಕ್ಷಗಳ ಒತ್ತಾಯ ಅತ್ಯಂತ ತರ್ಕಬದ್ಧವಾದದ್ದು ಹಾಗೂ ನ್ಯಾಯಬದ್ಧವಾದದ್ದು ಎಂದಿದೆ. ಆದರೆ ನರಸಿಂಹರಾವ್ ಸರಕಾರ ಹಠಮಾರಿತನದಿಂದ ಇದಕ್ಕೆ ನಿರಾಕರಿಸಿ ಸಂಸತ್ತಿನಲ್ಲಿ ಸ್ಥಗಿತತೆ ಸೃಷ್ಟಿಸಿದೆ ಎಂದು ಪೊಲಿಟ್ ಬ್ಯೂರೋ ದೂಷಿಸಿದೆ.

ಖಾಸಗೀಕರಣದಿಂದ ಹಣದ ಲೂಟಿ

ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ರಕ್ಷಿಸುವ, ರಾಜಕೀಯ ಅಧಿಕಾರಗಳಲ್ಲಿರುವ ವ್ಯಕ್ತಿಗಳು ಹಾಗೂ ವ್ಯಾಪಾರೀ ಗುಂಪುಗಳ ನಡುವೆ ನಂಟನ್ನು ಪೋಷಿಸುವ ಒಂದು ನೀಚ ದಾಖಲೆಯನ್ನು ನರಸಿಂಹರಾವ್ ಸರಕಾರ ಹೊಂದಿದೆ-ಅದು ಬ್ಯಾಂಕ್-ಶೇರು ಹಗರಣದಲ್ಲಾಗಲೀ, ಸಕ್ಕರೆ ವ್ಯವಹಾರದಲ್ಲಾಗಲೀ, ಅಥವಾ ಹವಾಲಾ ಹಗರಣದಲ್ಲಾಗಲಿ ಎಲ್ಲಾ ಸಂದರ್ಭ

ಪುಟ 8 ನೋಡಿ

'ಐಕ್ಯರಂಗ'ದ ಓದುಗರಿಗೆ, ಪಜೆನ್ನದಾರರಿಗೆ 1996ರ ಶುಭಾಶಯಗಳು. 'ಜನತಾ ಪ್ರಜಾಪ್ರಭುತ್ವ'ದ ಗುರಿ ಸಾಧನೆಗೆ ಹೋರಾಟದ ಈ ಇನ್ನೊಂದು ವರ್ಷದ ಆರಂಭದ ಈ ಸಂದರ್ಭದಲ್ಲಿ 'ಜನತಾ ಪ್ರಜಾಪ್ರಭುತ್ವ ಕ್ರಾಂತಿ'ಯ ಹಾದಿ ಹಾಕಿಕೊಟ್ಟ ಭಾರತದ ದುಡಿಯುವ ವರ್ಗದ ಹಿರಿಯ ಮುಖಂಡರ(1964ರ ಏಳನೇ ಮಹಾಧಿವೇಶನ ಆರಿಸಿದ ಪೊಲಿಟ್‌ಬ್ಯೂರೋ ಸದಸ್ಯರ) ಭಾವಚಿತ್ರಗಳನ್ನೊಳಗೊಂಡ ಕ್ಯಾಲೆಂಡರ್ ಈ ಸಂಚಿಕೆಯ ಮಧ್ಯಪುಟದಲ್ಲಿದೆ

ಟೆಲಿಕಾಂ ಹಗರಣದ ಮೇಲೆ ಜಂಟಿ ಸಂಸದೀಯ ಸಮಿತಿ

ರಾಷ್ಟ್ರಪತಿಗಳಿಗೆ ರಾಷ್ಟ್ರೀಯರಂಗ-ಎಡರಂಗ ಮನವಿ

ಡಿಸೆಂಬರ್ 22ರಂದು ರಾಷ್ಟ್ರೀಯ ರಂಗ ಹಾಗೂ ಎಡರಂಗಗಳ ಪಕ್ಷಗಳಿಗೆ ಸೇರಿದ 117 ಸಂಸತ್ ಸದಸ್ಯರು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಮೂಲಭೂತ ಟೆಲಿಫೋನ್ ಕಾಂಟ್ರಾಕ್ಟ್ ಗಳಲ್ಲಿ ನಡೆದಿರುವ ಅನಿಯಮಿತತೆಗಳ ತನಿಖೆ ನಡೆಸಲು ಒಂದು ಜಂಟಿ ಸಂಸದೀಯ ಸಮಿತಿ ರಚಿಸುವಂತೆ ಸರಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ರಾಷ್ಟ್ರಪತಿಗಳಿಗೆ ಅರ್ಪಿಸಿದ ಮನವಿ ಪತ್ರದಲ್ಲಿ ಈ ಸಂಸತ್ ದಸ್ಯರು ನರಸಿಂಹರಾಯರ ಐದು ವರ್ಷಗಳ ಆಳ್ವಿಕೆಯಲ್ಲಿ ಈಗಿನ ಟೆಲಿಕಾಂ ಹಗರಣವೂ ಸೇರಿದಂತೆ ನಡೆದಿರುವ ಭ್ರಷ್ಟಾಚಾರಗಳನ್ನು ಪಟ್ಟಿ ಮಾಡಲಾಗಿದೆ.

ರಾಷ್ಟ್ರಪತಿಗಳನ್ನು ಭೇಟಿ ಮಾಡುವ ಮೊದಲು ಈ ಸಂಸತ್ ಸದಸ್ಯರು ಸಂಸತ್ ಭವನದಿಂದ ಸರಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಡೆಸಿದರು.

ಪರಿಸರ ಮಾಲಿನ್ಯದ ಹೆಸರಿನಲ್ಲಿ ಕೈಗಾರಿಕೆಗಳೇ ಬೇಡ ಎಂಬ ನಿಲುಮೆ ಸರಿಯಲ್ಲ

ಡಿಸೆಂಬರ್ 21ರಂದು ಮಂಗಳೂರಿನಲ್ಲಿ ಎಂ.ಆರ್.ಪಿ.ಎಲ್.ನವರು ಪೈಪ್ ಲೈನ್ ಹಾಕುವುದರ ವಿರುದ್ಧ ಪ್ರತಿಭಟನೆ ನಡೆದಾಗ ಪೋಲೀಸ್ ಗೋಲೀಬಾರಿನಿಂದಾಗಿ 9 ಮಂದಿಗೆ ಗಾಯವಾಗಿರುವ ಘಟನೆಯ ಬಗ್ಗೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿಕೆಯೊಂದರಲ್ಲಿ ಖೇದ ವ್ಯಕ್ತಪಡಿಸಿದೆ. ಆದರೆ ಅದೇ ವೇಳೆ ಪರಿಸರದ ಮಾಲಿನ್ಯ ಎಂಬ ನೆಪದಲ್ಲಿ ಕೈಗಾರಿಕೆಗಳೇ ಬೇಡ ಎಂಬ ನಿಲುಮೆ ತಾಳುವುದು ಸರಿಯಲ್ಲ ಎಂದು ಅದು ಅಭಿಪ್ರಾಯಪಟ್ಟಿದೆ.

ಬಹಳ ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆ ಕೈಗಾರಿಕೆಯಲ್ಲಿ ಹಿಂದೆ ಬಿದ್ದಿದೆ. ಅಲ್ಲಿನ ಜನತೆ ಬೀಡಿ, ಹೆಂಚಿನಂತಹ ಉದ್ದಿಮೆಗಳಲ್ಲೇ ಬಡತನದಲ್ಲೇ ಇರಬೇಕಾಗಿ ಬಂದಿದೆ. ಆದ್ದರಿಂದ ರಾಜ್ಯ ಸರಕಾರ ಕೆಲವು ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಬೇಕೆನ್ನುವುದನ್ನು ಸಿಪಿಐ(ಎಂ) ಸ್ವಾಗತಿಸುವುದಾಗಿ ಹೇಳಿರುವ ಕಾರ್ಯದರ್ಶಿ ಮಂಡಳಿ ಅದೇ ವೇಳೆಗೆ ದೊಡ್ಡ ಕೈಗಾರಿಕೆಗಳು ಬರುವಾಗ ಸಹಜವಾಗಿಯೇ ಆಗುವ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸರಿಯಾದ ಕ್ರಮ ಇರುವುದೂ ಅಗತ್ಯ ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ. "ದುರದೃಷ್ಟಕರ ಸಂಗತಿಯೆಂದರೆ ಕೆಲವು ಹಿತಾಸಕ್ತಿಗಳು ಅಲ್ಲಿನ ಮೀನುಗಾರರಿಗೆ ತಪ್ಪು ಮಾಹಿತಿ ಕೊಟ್ಟು, ಅವರ ಜೀವನವೇ ಹಾಳಾಗುತ್ತಿದೆ ಎಂಬ ಅಭಿಪ್ರಾಯ ಕೊಟ್ಟು ಅವರನ್ನು ಪ್ರಚೋದಿಸುತ್ತಿದ್ದಾರೆ. ಅದು ಖಂಡನೀಯ" ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿಕೆ ತಿಳಿಸಿದೆ.

ವರ್ತಮಾನ

ಮೊದಲು ಸಮಾನತೆ-ಆಮೇಲೆ ಏಕರೂಪತೆ

'ಏಕರೂಪ ನಾಗರಿಕ ಸಂಹಿತೆ'ಯ ಕೂಗಿನ ಸಂದರ್ಭದಲ್ಲಿ ಮಹಿಳೆಯರ ಒತ್ತಾಯ

ಅಖಿಲ ಭಾರತ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ದಿಲ್ಲಿಯಲ್ಲಿ ಡಿಸೆಂಬರ್ 9 ರಂದು ಏರ್ಪಡಿಸಿದ" ಸಮಾನ ಹಕ್ಕುಗಳು, ಸಮಾನ ಕಾನೂನುಗಳು" ವಿಷಯದ ರಾಷ್ಟ್ರೀಯ ಸಮಾವೇಶ ಪ್ರತಿಯೊಂದು ಕೋಮಿನೊಳಗೆ ಎಲ್ಲಾ ಮಹಿಳೆಯರಿಗೆ ಸಮಾನತೆ ಸಿಗುವಂತಾಗಲು ವೈಯಕ್ತಿಕ ಕಾನೂನುಗಳನ್ನು ಸುದಾರಿಸಬೇಕೆಂದು ಬಲವಾಗಿ ಆಗ್ರಹಪಡಿಸಿದೆ. ಬಿಜೆಪಿಯ 'ಏಕರೂಪ ನಾಗರಿಕ ಸಂಹಿತೆ'ಯ ರಾಜಕೀಯ-ಪ್ರೇರಿತ ಒತ್ತಾಯ ಹಿಂದುತ್ವ ಶಕ್ತಿಗಳು ಮತ್ತು ಇತರ ಎಲ್ಲಾ ಬಣಗಳ ಮೂಲಭೂತವಾದಿಗಳು ಪ್ರತಿಪಾದಿಸುವ ಮಹಿಳಾ-ವಿರೋಧಿ, ಪಿತೃಪ್ರಧಾನ ಹಾಗೂ ಅಸಮಾನತೆಯಿಂದ ಕೂಡಿದ ನಿಲುವುಗಳನ್ನು ಹೇರುವ ಪ್ರಯತ್ನವಲ್ಲದೆ ಮತ್ತೇನೂ ಅಲ್ಲ ಎಂದು ಸಮಾವೇಶ ತೀವ್ರವಾಗಿ ಟೀಕಿಸಿದೆ.

ದೇಶದಾದ್ಯಂತದಿಂದ 1162 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಪಶ್ಚಿಮದಲ್ಲಿ ರಾಜಾಸ್ತಾನದಿಂದ ಉತ್ತರ-ಪೂರ್ವದಲ್ಲಿ ಮಣಿಪುರ, ತ್ರಿಪುರಾದವರೆಗೆ ಉತ್ತರದಲ್ಲಿ ಹಿಮಾಚಲ ಪ್ರದೇಶದಿಂದ ದಕ್ಷಿಣದ ಕೇರಳದವರೆಗೆ ಎಲ್ಲಾ ಪ್ರದೇಶಗಳಿಂದ ಪ್ರತಿನಿಧಿಗಳು ಬಂದಿದ್ದರು. ಈ ಗಮನ ಸೆಳೆದ ಸಭೆಯಲ್ಲಿ ಎಲ್ಲಾ ನಂಬಿಕೆಗಳ, ಧರ್ಮಗಳ ಮಹಿಳೆಯರು ಭಾಗವಹಿಸಿದ್ದರು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಮಹಾರಾಷ್ಟ್ರ, ಮಧ್ಯಪ್ರದೇಶ, ಒರಿಸ್ಸಾ, ಹಿಮಾಚಲಪ್ರದೇಶ, ಮಣಿಪುರ, ಪಶ್ಚಿಮ ಬಂಗಾಳ, ತ್ರಿಪುರಾ, ಅಸ್ಸಾಂ, ಕೇರಳ ಇತ್ಯಾದಿಗಳಿಂದ ವಿವಿಧ ಆದಿವಾಸಿ ಬುಡಕಟ್ಟುಗಳ ಮಹಿಳೆಯರು ಬಂದಿದ್ದರು. ವಿವಿಧ ರಾಜ್ಯಗಳ ಮಹಿಳಾಕಾರ್ಯಕರ್ತರ ಅನುಭವಗಳನ್ನು ಕೇಳಿದರು. ಕಾನೂನಿನ ಸಮಾನತೆ ಎಂಬುದಿದ್ದರೂ ಎಲ್ಲಾ ಕೋಮುಗಳ ಮಹಿಳೆಯರು ಮದುವೆ, ವಿಚ್ಛೇದನ, ಕಸ್ಟಡಿ, ದತ್ತು, ಆಸ್ತಿ ಹಕ್ಕುಗಳು, ಮಾಲೀಕತ್ವ ಇತ್ಯಾದಿಗಳಲ್ಲಿ ವಿಪರೀತ ಪಕ್ಷಪಾತ ಹಾಗೂ ಅನ್ಯಾಯವನ್ನು ಎದುರಿಸಬೇಕಾಗುತ್ತಿದೆ ಎಂದು ಅವರೆಲ್ಲಾ ಒತ್ತಿ ಹೇಳಿದರು.

ಧೈರ್ಯದ ಸವಾಲು

ಈ ಸಮಾವೇಶದ ವಿಭಿನ್ನ ಅಧಿವೇಶನಗಳಲ್ಲಿ ಭಾಗವಹಿಸಿದ ವಿಶೇಷ ಆಹ್ವಾನಿತರು ಮೂಲಭೂತವಾದಿಗಳಿಗೆ ವಿಭಿನ್ನ ರೀತಿಗಳಲ್ಲಿ ಧೈರ್ಯದಿಂದ ಸವಾಲು ಹಾಕಿದರು. ತಾವು ಧರ್ಮದ ರಕ್ಷಕರೆಂದುಕೊಳ್ಳುವವರು ಹೇರಿದ ಪಕ್ಷಪಾತದ ಕಾನೂನುಗಳು, ಫತ್ವಾಗಳು, ಆದೇಶಗಳಿಗೇ ಸವಾಲು ಹಾಕಿದವರು ಅಲ್ಲಿದ್ದರು. ಕ್ರಿಶ್ಚಿಯನ್ ವಾರಸುದಾರಿಕೆ ಕಾನೂನನ್ನು ಪ್ರಶ್ನಿಸಿ ಆಸ್ತಿಯಲ್ಲಿ ಪಾಲಿಗಾಗಿ ಹೋರಾಡುತ್ತಿರುವ ಮೇರಿ ರಾಯ್ ಹೇಗೆ ತನಗೆ ಜೀವ ಬೆದರಿಕೆ ಬರುತ್ತಿದೆ ಎಂದು ತಿಳಿಸಿದರು. ಚುನಾವಣೆಯಲ್ಲಿ ಬುರ್ಖಾ ಧರಿಸದೆ ಸ್ಪರ್ಧಿಸಬಾರದೆಂಬ ಫತ್ವಾವನ್ನು ಉಲ್ಲಂಘಿಸಿದ ದೇವದ್‌ನ ಝಿನತ್ ನಾಝ್ ತಾನು ಕೋಮುಗಳ ಭೇದಭಾವವಿಲ್ಲದೆ ಮಹಿಳೆಯರಿಗಾಗಿ ಕೆಲಸ ಮಾಡಿದ್ದರಿಂದ ಹಿಂದೂ ಮತ್ತು ಮುಸ್ಲಿಂ ಎರಡೂ ಕೋಮುಗಳ ಮಹಿಳೆಯರ ಬೆಂಬಲ ಪಡೆದು ಗೆದ್ದು ಬಂದ ಬಗೆಯನ್ನು ವಿವರಿಸಿ ಸಭಿಕರಲ್ಲಿ ಸ್ಫೂರ್ತಿ ತುಂಬಿದರು.





ಮಧ್ಯಪ್ರದೇಶದ ಆದಿವಾಸಿ ಮಹಿಳೆ ಮರಿಯಮ್ ಹೇಗೆ ಹೇಗೆ ಬಿಜೆಪಿ ಕ್ರಿಶ್ಚಿಯನ್ ಆದಿವಾಸಿಗಳನ್ನು ವಿದೇಶೀಯರೆಂದು ಹಣೆಪಟ್ಟಿ ಹಚ್ಚಿ ಭಯೋತ್ಪಾದನೆಯ ಮೂಲಕ ಅವರ ಒಕ್ಕಲೆಬ್ಬಿಸಲು ಪ್ರಯತ್ನಿಸುತ್ತಿದೆ ಎಂಬುದನ್ನು ಬೆಳಕಿಗೆ ತಂದರು.

"ಜಂಟಿ ಮಹಿಳಾ ಕಾರ್ಯಕ್ರಮ" ಎಂಬ ಸಂಘಟನೆಯ ಜ್ಯೋತ್ಸ್ನಾಚಟರ್ಜಿ ಹೇಗೆ 1974ರಿಂದ ಕ್ರಿಶ್ಚಿಯನ್ ಮಹಿಳೆಯರು ತಮ್ಮ ಕೋಮಿನ ಒಳಗೆ ಪಕ್ಷಪಾತದ ವಿರುದ್ಧ ಹೋರಾಡುತ್ತಿದ್ದಾರೆ, ಕಾನೂನಿನಲ್ಲಿರುವ ಸಮಾನತೆಯನ್ನು ಧಾರ್ಮಿಕ ಮುಖಂಡರು ಗಣನೆಗೆ ತೆಗೆದುಕೊಳ್ಳುವಂತೆ ಮಾಡಲು ಎಷ್ಟು ದೀರ್ಘ ಸಮಯ ಹಿಡಿಯಿತು ಎಂಬುದರ ವಿವರ ನೀಡಿದರು. ಇತರ ವಿಶೇಷ ಆಹ್ವಾನಿತರರಾದ ಸಿಸ್ಟರ್ ಕ್ಲಿಯೋಪಾತ್ರ, ಸಿಸ್ಟರ್ ಶಾಲಿನಿ, ಕಾನ್‌ಪುರದ ನಾದಿರಾ ಜಾತ್ಯಾತೀತ ನೀತಿಗಳಿಗಾಗಿ ಪ್ರತಿಯೊಂದು ಕೋಮಿನ ಮೂಲಭೂತವಾದಿಗಳಿಗೆ ಸವಾಲು ಹಾಕಬೇಕಾದ ಅಗತ್ಯವನ್ನು ಒತ್ತಿ ಹೇಳಿದರು.

ಎಐಡಿಡಬ್ಲ್ಯುಎ ಅಧ್ಯಕ್ಷೆ ಸುಶೀಲಾ ಗೋಪಾಲನ್ ತನ್ನ ಆರಂಭಿಕ ಟಿಪ್ಪಣಿಯಲ್ಲಿ ಕಳೆದ ಐದು ವರ್ಷಗಳಲ್ಲಿ ಸರಕಾರದ ಧೋರಣೆಗಳಿಂದಾಗಿ, ಕೋಮುವಾದಿ ಹಾಗೂ ಸಾಮಾಜಿಕ ಪ್ರತಿಗಾಮೀ ಶಕ್ತಿಗಳ ಆಕ್ರಮಣಗಳಿಂದಾಗಿ ಬಹುಪಾಲು ಮಹಿಳೆಯರ ಸ್ಥಾನಮಾನ ಹದಗೆಟ್ಟಿದೆ ಎಂದು ಗಮನಿಸಿದರು. ಬಿಜೆಪಿ ಮತ್ತು ಹಿಂದುತ್ವ ಶಕ್ತಿಗಳ ಸಿದ್ಧಾಂತವೇ ಪುರುಷ ಪ್ರಧಾನತೆ ಹಾಗೂ ಮಹಿಳೆಯರ ಅಡಿಯಾಳತ್ವವನ್ನು ಆಧರಿಸಿದ್ದರೂ ಈಗ ಏಕರೂಪದ ನಾಗರಿಕ ಸಂಹಿತೆಯ ಪ್ರಶ್ನೆ ಎತ್ತುತ್ತಿದ್ದಾರೆ,ಇದನ್ನು ಬಯಲಿಗೆಳೆಯ ಬೇಕು ಎಂದು ಹೇಳಿದರು.

ಸಮಾನ ಶೋಷಣೆ!

ಸಮಾವೇಶದ ಪ್ರಧಾನ ನಿರ್ಣಯ "ಸಮಾನ ಕಾನೂನುಗಳು"ಎಂಬುದನ್ನು ಮಂಡಿಸುತ್ತಾ ಎಐಡಿಡಬ್ಲ್ಯುಎನ ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಹಿಂದುತ್ವ ಮತ್ತು ಅಲ್ಪಸಂಖ್ಯಾತ ಮೂಲಭೂತವಾದಿ ಶಕ್ತಿಗಳನ್ನು ಎದುರಿಸಬೇಕಾದ ತುರ್ತು ಅಗತ್ಯದ ಬಗ್ಗೆ ವಿವರವಾಗಿ ಮಾತನಾಡಿದರು. ಎರಡೂ ಶಕ್ತಿಗಳಲ್ಲಿ ಒಂದು ಸಮಾನ ಅಂಶವಿದೆ. ಅದೆಂದರೆ ತಮ್ಮ ಕೋಮಿನ ಮಹಿಳೆಯರ ಹಿತಾಸಕ್ತಿಗಳ ಬಗ್ಗೆ ಪರಮ ನಿರ್ಲಕ್ಷ ಹಾಗೂ ಪುರುಷ ಪಾರಮ್ಯದ ಬಗ್ಗೆ ತೀವ್ರ ಬದ್ಧತೆ ಎಂದು ಬೃಂದಾ ಕಾರಟ್ ಹೇಳಿದರು. ಈ ರೀತಿ ಎಲ್ಲಾ ಕೋಮುಗಳ ಮಹಿಳೆಯರು "ಆರ್ಥಿಕ ಶೋಷಣೆ, ಸಾಮಾಜಿಕ ಪಕ್ಷಪಾತ ಹಾಗೂ ಹಿಂಸಾಚಾರದ ಒಂದು ಲಿಖಿತ ಪಿತೃಪ್ರಧಾನ ಏಕರೂಪದ ಸಂಹಿತೆಗೆ ಒಳಗಾಗಿದ್ದಾರೆ" ಎನ್ನುತ್ತಾ ಮಹಿಳೆಯರು ಏಕರೂಪ ನಾಗರಿಕ ಸಂಹಿತೆಯನ್ನಲ್ಲ ಎಲ್ಲಾ ಕೋಮುಗಳೊಳಗೆ ಮಹಿಳೆ ಮತ್ತು ಪುರುಷರ ನಡುವೆ ಸಮಾನತೆ ಕಾನೂನುಗಳಿರಬೇಕೆಂದು ಒತ್ತಾಯಿಸಬೇಕು ಎಂದರು. ಏಕೆಂದರೆ ಏಕರೂಪ ನಾಗರಿಕ ಸಂಹಿತೆಯೆಂದರೆ ಈಗ ಎಲ್ಲಾ ವೈಯಕ್ತಿಕ ಕಾನೂನುಗಳಲ್ಲಿರುವ ಮಹಿಳಾ-ವಿರೋಧಿ "ನೀತಿ-ಬೋದೆ"ಗಳನ್ನು ಬಲಪಡಿಸಿದಂತೆ ಎಂದರು.

ಮುಸ್ಲಿಂ ಮಹಿಳೆಯರ ಹಕ್ಕುಗಳನ್ನು ಸುಧಾರಿಸುವ ನೆಪದಲ್ಲಿ ಒಂದು ಏಕರೂಪದ ನಾಗರಿಕ ಸಂಹಿತೆ ಬೇಕೆಂದು ಒತ್ತಾಯಿಸುವ ಬಿಜೆಪಿಯ ನಗ್ನ ಗೋಸುಂಬೆತನದ ಮೇಲೆ ಗಮನ ಕೇಂದ್ರೀಕರಿಸುತ್ತಾ ಬೃಂದಾಕಾರಟ್ ಅವರು ಹಿಂದುತ್ವ ಶಕ್ತಿಗಳು ಆರಂಭದಲ್ಲಿ ಹಿಂದೂ ಕಾನೂನುಗಳಲ್ಲಿ ಕೆಲವು ಸೀಮಿತ ಸುಧಾರಣೆ ತರುವುದನ್ನು ಕೂಡಾ ವಿರೋಧಿಸಿದ್ದರು, ಈಗಲೂ ಕೂಡಾ ಬಿಜೆಪಿ ರಾಜ್ಯ ಸರಕಾರಗಳು"ಹಿಂದೂ ವೈಯಕ್ತಿಕ ಕಾನೂನುಗಳಲ್ಲಿ ಹಿಂದೂ ಮಹಿಳೆಯರಿಗಿರುವ ಕಾನೂನಾತ್ಮಕ ಅಸಮಾನತೆ ಹಾಗೂ ನ್ಯೂನತೆಗಳನ್ನು ಸರಿಪಡಿಸಲು ಒಂದೇ ಒಂದು ಕ್ರಮ ಕೈಗೊಂಡಿಲ್ಲ ಎಂಬ ಸಂಗತಿಯತ್ತ ಗಮನ ಸೆಳೆದರು. ಮಹಿಳೆಯರ ಹಕ್ಕುಗಳನ್ನು ನಿರಾಕರಿಸುವ ಸಂದರ್ಭ ಬಂದಾಗ ಲ್ಪಸಂಖ್ಯಾತ ಮೂಲಭೂತವಾದಿಗಳೂ ಭಿನ್ನವಾಗಿಯೇನು ವರ್ತಿಸುತ್ತಿಲ್ಲ ಎಂದು ತೋರಿಸಲು ಉದಾಹರಣೆಗಳನ್ನು ನೀಡಿದರು. ಬುಡಕಟ್ಟು ಪ್ರದೇಶಗಳಲ್ಲೂ ಪರಿಸ್ಥಿತಿ ಕೆಡುತ್ತಿದೆ ಎನ್ನುತ್ತಾ ಇತ್ತೀಚೆಗೆ ಅರುಣಾಚಲ ಪ್ರದೇಶ ಸರಕಾರ ಬುಡಕಟ್ಟು ಸಂಪ್ರದಾಯ, ಆಚರಣೆಗಳಿಗೆ ಸಾರಾಸಗಟು ಅನುಮೋದನೆ ನೀಡುವ ಕಾನೂನೊಂದನ್ನು ಇತ್ತೀಚೆಗೆ ಪಾಸು ಮಾಡಿದ್ದನ್ನು ಉದಾಹರಣೆಯಾಗಿ ನೀಡಿದರು.

ಇದೊಂದು ನಕಾರಾತ್ಮಕ ಅಜೆಂಡಾ

ಏಕರೂಪ ನಾಗರಿಕ ಸಂಹಿತೆಯ ಚರ್ಚೆಯನ್ನು ಅಥವಾ ವೈಯಕ್ತಿಕ ಕಾನೂನಿನ ಸುಧಾರಣೆಯ ಪ್ರಶ್ನೆಯನ್ನು ಕೋಮುವಾದಿ ಚೌಕಟ್ಟಿನ ಹೊರಗೊಯ್ಯಬೇಕು ಎಂದು ಒತ್ತಿ ಹೇಳುತ್ತಾ ಬಂದ ಬೃಂದಾ ಕಾರಟ್ ಸಮಾವೇಶದ ಉದ್ದೇಶ ಎಲ್ಲಾ ಕೋಮುಗಳ ಮಹಿಳೆಯರ ಸರ್ವ ಸಮಾನಾದ ಕಾನೂನು ಆಧಾರವನ್ನು ಹಂತ ಹಂತವಾಗಿ ಬಲಗೊಳಿಸುವ ಒಂದು ನಿಲುವನ್ನು ಪ್ರತಿಪಾದಿಸುವುದು, ಇದಕ್ಕಾಗಿ"ತಕ್ಷಣ ಜಾರಿಯಾಗುವಂತೆ ಶಾಸನಗಳನ್ನು ತರುವುದು".ಹಾಗೂ ಮಹಿಳಾ ಸಮಾನತೆಯ ದೃಷ್ಟಿಯಿಂದ ಈಗಿರುವ ಎಲ್ಲಾ ವೈಯಕ್ತಿಕ ಕಾನೂನುಗಳನ್ನು ಸುಧಾರಿಸುವುದು ಎಂದರು. ಎಲ್ಲರಿಗೂ ಅನ್ವಯವಾಗುವ ಕಾನೂನುಗಳೆಂದರೆ ಮದುವೆಯ ಕಡ್ಡಾಯ ನೊಂದಣಿ, ಮಹಿಳೆಯರ ಮಾನಭಂಗದ ವಿರುದ್ಧ ಸುಧಾರಿತ ಕಾನೂನು, ಮನೆಯಲ್ಲಿ ಹಿಂಸಾಚಾರ, ಪೋಷಣೆ, ಆಸ್ತಿ ಹಕ್ಕು ಇತ್ಯಾದಿಗಳ ಬಗ್ಗೆ ಕ್ರಮಗಳಿರಬೇಕು. ವೈಯಕ್ತಿಕ ಕಾನೂನುಗಳ ಸುಧಾರಣೆಗಳಿಗೆ ಸಂಬಂಧಪಟ್ಟಂತೆ "ವಿವಿಧ ಕೋಮುಗಳ ಮಹಿಳೆಯರು ತಮ್ಮ ಕೋಮಿನೊಳಗಿರುವ ಪುರುಷ ಸುಧಾರಕರೊಡಗೂಡಿ ಸುಧಾರಣೆಗಳನ್ನು ತರಲು ಮುಂದಡಿಯಿಡಬೇಕು" ಎಂದು ಸಮಾವೇಶದ ನಿರ್ಣಯ ಹೇಳಿದೆ.

ಎಐಡಿಡಬ್ಲ್ಯುಎ ಮುಖಂಡರು ಹಾಗೂ ಕಾರ್ಯಕರ್ತರಲ್ಲದೆ ಸಮಾವೇಶದಲ್ಲಿ ಇತರ ಹಲವಾರು ಗಣ್ಯ ಮಹಿಳೆಯರು ಭಾಗವಹಿಸಿ ಮಾತನಾಡಿದರು. ಸರ್ವಸಾಮಾನ್ಯ, ಜಾತ್ಯಾತೀತ ಕಾನೂನುಗಳಿರಬೇಕೆಂಬ ಕರೆಯನ್ನು ಅವರು ಅನುಮೋದಿಸಿದರು. ಬಾರತ ಕ್ಯಾಥೋಲಿಕ್ ಬಿಷಪ್ ಸಮ್ಮೇಳನ ಸಿಸ್ಟರ್ ಕ್ಲಿಯೋಪಾತ್ರ, ಇಂಡಿಯನ್ ಸೋಶಲ್ ಇನ್ಸಿಟಿಟ್ಯೂಟ್‌ನ ಸಿಸ್ಟರ್ ಶಾಲಿನಿ, ಅಲೀಘಡ ಮುಸ್ಲಿಂ ವಿಶ್ವವಿದ್ಯಾಲಯದ ಪ್ರೊ.ಹಾಶ್ಮಿ ಮತ್ತು ಡಾ.ಸಂಯುದ್ದೀನ್, ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರದ ಡಾ. ವೀಣಾ ಮುಜುಂದಾರ್ ಹಾಗೂ ಎನ್‌ಎಫ್‌ಐಡಬ್ಲ್ಯುನ ಪ್ರಮೀಳಾ ಇವರಲ್ಲಿ ಮುಖ್ಯರು.

ಮುಖ್ಯ ನಿರ್ಣಯವಲ್ಲದೆ ಸಮಾವೇಶದಲ್ಲಿ ಹಿಂದೂ ಕಾನೂನುಗಳು, ಮುಸ್ಲಿಂ ಕಾನೂನುಗಳು, ಕ್ರಿಶ್ಚಿಯನ್ ಕಾನೂನುಗಳು ಹಾಗೂ ಬುಡಕಟ್ಟು ಸಂಪ್ರಾದಾಯಿಕ ಕಾನೂನುಗಳ ಬಗ್ಗೆ ಪ್ರತ್ಯೇಕ ಅದಿವೇಶನಗಳು ನಡೆದು ಕೂಲಂಕುಷ ಚರ್ಚೆ ನಡೆಯಿತು.

(ಐ.ಎನ್.ಎನ್.)

ಕಾಂ. ಬಿನೋಯ್ ಕೃಷ್ಣ ಚೌಧುರಿ ಹೇಳಿಕೆ

ಸಿಪಿಐ(ಎಂ) ಪ.ಬಂಗಾಳ ರಾಜ್ಯ ಕಾರ್ಯದರ್ಶಿ ಮಂಡಳಿ ವಿವರಣೆ

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯ ಹಾಗೂ ಪಶ್ಚಿಮ ಬಂಗಾಳ ಭೂಸುಧಾರಣಾ ಮಂತ್ರಿಗಳಾದ ಬಿನೋಯ್ ಕೃಷ್ಣ ಚೌಧುರಿಯವರ ಭಾಷಣವನ್ನು ಕೆಲವು ಕಲ್ಕತ್ತಾ ಪತ್ರಿಕೆಗಳು(ಅವುಗಳನ್ನನುಸರಿಸಿ ಬೇರೆಡೆಯ ಪತ್ರಿಕೆಗಳೂ ಕೂಡಾ)ತಪ್ಪಾಗಿ ವರದಿ ಮಾಡಿ ಕಟ್ಟುಕಥೆಗಳನ್ನು ಸೃಷ್ಟಿಸಿದ್ದಾರೆ ಎಂದು ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿರುಪಮ್ ಸೇನ್ ಕಾರ್ಯದರ್ಶಿ ಮಂಡಳಿ ಪರವಾಗಿ ಸ್ಪಷ್ಟೀಕರಣ ನೀಡುತ್ತಾ ಹೇಳಿದ್ದಾರೆ.

ಬಿನೋಯ್ ಚೌಧುರಿಯವರು ಬರ್ದ್ವಾನ್‌ನಲ್ಲಿ ದಾಮೋದರ್ ಕಣಿವೆ ಕಾರ್ಪೋರೇಶನ್ ಏರ್ಪಡಿಸಿದ್ದ ಒಂದು ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ಕೇಂದ್ರ ಸರಕಾರದ ಮೇಲೆ ಭ್ರಷ್ಟಾಚಾರದ ಆಪಾದನೆ ಹಾಕುತ್ತಾ ಅದು ತನ್ನ ಯೋಜನೆಗಳನ್ನು ಜ್ಯಾರಿ ಮಾಡುವಲ್ಲಿ ಕಾಂಟ್ರಾಕ್ಟರುಗಳ ಮೇಲೆಯೇ ಸಂಪೂರ್ಣ ಅವಲಂಬಿಸಿದೆ ಎಂದಿದ್ದರು. ಅವರು ಪಂ.ಬಂಗಾಳ ರಾಜ್ಯ ಸರಕಾರದ ನಿರ್ವಹಣೆಯಲ್ಲೂ ಭ್ರಷ್ಟಾಚಾರವಿದೆಯೆಂದು ಸೂಚಿಸಿದರೆಂದು ಈ ಪತ್ರಿಕಾ ವರದಿಗಳು ಕಥೆ ಕಟ್ಟಿವೆ ಎಂದು ನಿರುಪಮ್ ಸೇನ್ ಹೇಳಿದ್ದಾರೆ.

ಬಿನೋಯ್ ಕೃಷ್ಣ ಚೌಧುರಿಯವರ ಇಡೀ ಭಾಷಣದ ಒತ್ತು ಕೇಂದ್ರ ಸರಕಾರದ ವಿರುದ್ಧವಿತ್ತು ಎಂದು ನಿರುಪಮ್ ಸೇನ್ ಅವರ ಭಾಷಣದಿಂದಲೇ ಉದ್ಧರಿಸುತ್ತಾ ವಿವರಣೆ ನೀಡಿದರು. ರಾಜ್ಯದಲ್ಲಿ ಪಂಚಾಯತುಗಳ ಫಲಾನುಭವಿಗಳ ಸಮಿತಿಯ ಉದಾಹರಣೆ ನೀಡುತ್ತಾ ಇದು ಭ್ರಷ್ಟಾಚಾರವನ್ನು ತಡೆಯುವಲ್ಲಿ ಜನಗಳ ಮುತುವರ್ಜಿಯ ಸರಿಯಾದ ದಾರಿ ಎಂದು ಬಿನೋಯ್ ಕೃಷ್ಣ ಚೌಧುರಿಯವರು ತಮ್ಮ ಭಾಷಣದಲ್ಲಿ ಉದಾಹರಣೆಯನ್ನೂ ನೀಡಿದ್ದರು.

ಬಿನೋಯ್ ಚೌಧುರಿಯವರು ಭ್ರಷ್ಟಾಚಾರ ಪ್ರಶ್ನೆಯ ಬಗ್ಗೆ ಸರಿಯಾದ ವಿಶ್ಲೇಷಣೆ ಮಾಡಿ ರಾಜ್ಯ ಸರಕಾರ ಕಾರ್ಯನಿರ್ವಹಣೆಯನ್ನು ಕೇಂದ್ರ ಸರಕಾರದ ನಿರ್ವಹಣೆಯೊಂದಿಗೆ ಹೋಲಿಸಿದ್ದರು. ಅವರ ವಿಶ್ಲೇಷಣೆ ಸಿಪಿಐ(ಎಂ) ನಿಲುವಿನ ಜಾಡಿನಲ್ಲೇ ಇತ್ತು ಎಂದಿರುವ ನಿರುಪಮ್ ಸೇನ್ ಇಡೀ ಪ್ರಶ್ನೆಯನ್ನು ತಪ್ಪಾಗಿ ಪ್ರಚಾರ ಮಾಡುವ ದುರುದ್ದೇಶದ ಪ್ರಯತ್ನ ಇದು ಎಂದರು.

ಈ ನಡುವೆ ಕಾಂಗ್ರೆಸ್(ಐ) ಪ್ರಕಟವಾದ ವರದಿಗಳ ಆಧಾರದ ಮೇಲೆ 'ತನಿಖಾ ಆಯೋಗ' ನೇಮಿಸಬೇಕು ಎಂದು ಒತ್ತಾಯಿಸಿದೆ. ಈ ಬಗ್ಗೆ ಪ್ರತಿಕ್ರಿಯಿಸುತ್ತಾ ಇನ್ನೊಬ್ಬ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಅನಿಲ್ ಬಿಸ್ವಾಸ್‌ರವರು "ಹಾಗಿದ್ದರೆ ಆ ತನಿಖಾ ಆಯೋಗವನ್ನು ಕೇದ್ರ ಸರಕಾರದ ವಿರುದ್ಧ ರೂಪಿಸಬೇಕು. ಏಕೆಂದರೆ ಚೌಧುರಿಯವರ ಆಪಾದನೆ ಕೇಂದ್ರದ ಸರಕಾರದ ವಿರುದ್ಧವಿತ್ತು" ಎಂದಿದ್ದಾರೆ.

"ಉದ್ದೇಶಪೂರ್ವಕ ವಿಕೃತಿ" ಕಾಂ.ಬಿನೋಯ್ ಚೌಧುರಿ ಹೇಳಿಕೆ

ಡಿಸೆಂಬರ್ 18ರಂದು ಕಾಂ.ಬಿನೋಯ್ ಚೌಧುರಿ ಮಿಡ್ನಾಪುರ್‌ನಿಂದ ಈ ಕೆಳಗಿನ ಹೇಳಿಕೆ ನೀಡಿದ್ದಾರೆ

"ಡಿಸೆಂಬರ್ 17, 1995ರಂದು ಬರ್ದ್ವಾನ್‌ನಲ್ಲಿ ನನ್ನ ಭಾಷಣವನ್ನು ಕೆಲವು ಪತ್ರಿಕೆಗಳಲ್ಲಿ ಉದ್ದೇಶಪೂರ್ವಕವಾಗಿ ವಿಕೃತಗೊಳಿಸಲಾಗಿದೆ. ಕೇಂದ್ರ ಸರಕಾರ ಮತ್ತು ಕೇಂದ್ರದ ಆಡಳಿತವನ್ನು ಭ್ರಷ್ಟ ಜನರು ನಡೆಸುತ್ತಿದ್ದಾರೆ ಎಂದು ನಾನು ಆ ಸಭೆಯಲ್ಲಿ ಹೇಳಿದ್ದೆ. ಕೆಲವು ಪತ್ರಿಕೆಗಳು ಗೊತ್ತಿದ್ದೂ "ಕೇಂದ್ರ ಸರಕಾರ" ಎಂಬ ಪದವನ್ನು ಬಿಟ್ಟಿದ್ದಾರೆ. ಆ ಸಭೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅಧಿಕಾರಿಗಳು ಮತ್ತು ನೌಕರರು ಇದ್ದರು. ಕೆಲವು ಕೇಂದ್ರ ಸರಕಾರದ ಅಧಿಕಾರಿಗಳೂ ಇದ್ದರು. ಅವರು ನನ್ನ ಭಾಷಣ ಕೇಳಿದ್ದಾರೆ."



ಕರ್ನಾಟಕ ಸುದ್ದಿ

ಸಿಐಟಿಯು ಕರೆಯ ಮೇರೆಗೆ ರಾಜ್ಯಾದ್ಯಂತ ಡಿಸೆಂಬರ್ 18ರಂದು ಒಂದು ವಾರ ಅಸಂಘಟಿತ ಕಾರ್ಮಿಕರು ಧರಣಿ, ಮೆರವಣಿಗೆ, ಪಿಕೆಟಿಂಗ್, ಮುಷ್ಕರಗಳ ಮೂಲಕ ತಮ್ಮನ್ನು ಕುರಿತಂತೆ ಸರಕಾರದ ನಿರ್ಲಕ್ಷ್ಯದ ವಿರುದ್ಧ ತಮ್ಮ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನಲ್ಲಿ ಡಿಸೆಂಬರ್ 18ರಂದು ನಡೆದ ಬೃಹತ್ ವಿಧಾನಸೌಧ ಚಲೋದ ಒಂದು ದೃಶ್ಯ.

ವಿವರಗಳು ಮುಂದಿನ ವಾರ

ಪೋಲೀಸ್ ದೌರ್ಜನ್ಯಕ್ಕೆ ಉಗ್ರ ಖಂಡನೆ

ಬೆಂಗಳೂರು: ಪೋಲೀಸ್ ಅಧಿಕಾರಿಯ ವಿರುದ್ಧ ಮನವಿ ಕೊಡಲು ಹೋದ ರೈತರ ಮನವಿಯನ್ನು ಸ್ವೀಕರಿಸದೇ ಬಂಧಿಸಿರುವುದು ಪ್ರಜಾಪ್ರಭುತ್ವದ ಚಳುವಳಿಗೆ ದೊಡ್ಡ ಪೆಟ್ಟನ್ನು ಕೊಟ್ಟಂತಾಗಿದೆ. ಅಮೃತಹಳ್ಳಿ ರೈತರು ನ್ಯಾಯಕ್ಕಾಗಿ ಅನೇಕ ವರ್ಷಗಳಿಂದ ಹೋರಾಟ ಮಾಡುತ್ತಿದ್ದು ಸರಕಾರಿ ಜಮೀನಿನಲ್ಲಿ ಕಟ್ಟಿರುವ ಮನೆಗಳಿಗೆ ಹಕ್ಕು ಪತ್ರ ನೀಡಬೇಕೆಂದು ಸರಕಾರಕ್ಕೆ ಅನೇಕ ಮನವಿಗಳನ್ನು ಸಲ್ಲಿಸಲಾಗಿವೆ. ಆದರೆ, ಸರಕಾರ ಬಡ ರೈತರ ಬೇಡಿಕೆಯನ್ನು ಈವರೆವಿಗೂ ಪೂರೈಸಿರುವುದಿಲ್ಲ. ಬಡ ರೈತರು ಕಟ್ಟಿಕೊಂಡಿರುವ ಮನೆಗಳು ನನ್ನವೇ ಎಂದು ಆರ್. ಬಂಗಾರಿ ಎಂಬುವವರು ಪೋಲೀಸರ ಸಹಾಯದಿಂದ ಇಲ್ಲಸಲ್ಲದ ಕಿರುಕುಳ ಕೊಡುತ್ತಿದ್ದಾರೆ. ಈ ವಿಷಯದಲ್ಲಿ ಈಗಾಗಲೇ ಸಿವಿಲ್ ನ್ಯಾಯಾಲಯವು ಇದು ಬಂಗಾರಿ ಜಮೀನಿನ ಸರಕಾರಿ ಭೂಮಿ ಎಂದು ಸಾಬೀತು ಮಾಡಿರುತ್ತದೆ. ಈ ಬಡ ಜನತೆಯ ಹೋರಾಟದ ನಾಯಕತ್ವವನ್ನು ವಹಿಸಿರುವ ಕೆ.ಸುಬ್ರಮಣಿಯವರಿಗೆ ಹೆಬ್ಬಾಳ ಪೋಲೀಸರ ಸಹಾಯದಿಂದ ಬಂಗಾರಿಯವರು ಅನೇಕ ಕಿರುಕುಳವನ್ನು ಕೊಡುತ್ತಾ ಬಂದಿದ್ದಾರೆ. ದೂರನ್ನು ಕೊಡಲು ಹೋದ ಸುಬ್ರಮಣಿ ಅವರನ್ನು ಬಂಧಿಸಿ, ಸುಮಾರು ಎರಡು ದಿನ ಪೋಲೀಸ್ ಠಾಣೆಯ ಲಾಕಪ್ ನಲ್ಲಿ ಚಿತ್ರಹಿಂಸೆ ನೀಡಿರುವುದಲ್ಲದೆ ಸುಳ್ಳು ಮೊಕದ್ದಮೆಯನ್ನು ಸರ್ಕಲ್ ಇನ್ಸ್ ಪೆಕ್ಟರ್ ಶ್ರೀ ಗಣೇಶಪ್ಪನವರು ಹಾಕಿ ಬಂಗಾರಿಯವರ ಜೊತೆ ಶಾಮೀಲಾಗಿರುತ್ತಾರೆ.

ಇದಕ್ಕೆ ಸಂಬಂಧಪಟ್ಟಂತೆ ನ್ಯಾಯಾಂಗ ತನಿಖೆಯಾಗಬೇಕೆಂದು ಒತ್ತಾಯಿಸಲು ಬೆಂಗಳೂರು ಉತ್ತರ ಉಪ ಆರಕ್ಷಕ ಆಯುಕ್ತರಾದ ಶ್ರೀ ದೊರೆಸ್ವಾಮಿ ನಾಯಕ್ ಅವರಿಗೆ ಮನವಿ ಸಲ್ಲಿಸಲು ಹೋದ ಸುಮಾರು 100ಕ್ಕೂ ಹೆಚ್ಚು ಮಹಿಳೆಯರೂ, ಮಕ್ಕಳನ್ನು ಬಂಧಿಸಿರುತ್ತಾರೆ. ಇದು ಪ್ರಜಾಪ್ರಭುತ್ವವನ್ನು ದಮನ ಮಾಡುವ ಕ್ರಮವಾಗಿರುತ್ತದೆ. ಕೂಡಲೇ ಬಂಗಾರಿಯವರ ಜೊತೆ ಶಾಮೀಲಾಗಿರುವ ಸರ್ಕಲ್ ಇನ್ಸ್ ಪೆಕ್ಟರ್ ಗಣೇಶಪ್ಪನ ವಿರುದ್ಧ ತನಿಖೆಯಾಗಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ಒತ್ತಾಯಿಸಿದೆ.

ಕೇಂದ್ರದ ನೀತಿಗಳ ವಿರುದ್ಧ ಮತ ಪ್ರದರ್ಶನ

ದ.ಕ.: ಕೇಂದ್ರ ಸರಕಾರದ ಆರ್ಥಿಕ ನೀತಿಗಳ ವಿರುದ್ಧ ಮತ್ತು ಕೋಮುವಾದದ ವಿರುದ್ಧ ದ.ಕ. ಜಿಲ್ಲೆಯ ವಿವಿಧ ಕಾರ್ಮಿಕ, ನೌಕರ, ರೈತ ಮತ್ತು ವಿದ್ಯಾರ್ಥಿ ಯುವಜನರ ಸಂಘಟನೆಗಳನ್ನೊಳಗೊಂಡ ಸಾಮೂಹಿಕ ಸಂಘಟನೆಗಳ ಜಿಲ್ಲಾ ವೇದಿಕೆಯ ಆಶ್ರಯದಲ್ಲಿ ಡಿಸೆಂಬರ್ 15ರಂದು ನಗರದ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಬೃಹತ್ ಪ್ರದರ್ಶನ ನಡೆಸಲಾಯಿತು.

ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಸಿಐಟಿಯು ಅಧ್ಯಕ್ಷ ಬಿ.ಮಾಧವರವರು ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಯಿಂದಾಗಿ ಬೆಲೆಯೇರಿಕೆ ಮತ್ತು ನಿರುದ್ಯೋಗವು ವಿಪರೀತವಾಗಿ ಹೆಚ್ಚುತ್ತಿರುವುದನ್ನು ಎತ್ತಿತೋರಿಸಿ, ಜನತೆಯ ಸಮಸ್ಯೆಗಳಿಗೆ ಸ್ಪಂದಿಸದ ಸರಕಾರದನೀತಿಯನ್ನು ಖಂಡಿಸಿದರು. ಎಐಟಿಯು ಸಿಯಜಿಲ್ಲಾಕಾರ್ಯದರ್ಶಿಹೆಚ್.ಉಮಾನಾಥ್ ಮಾತನಾಡುತ್ತಾ, ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಸಾರ್ವಜನಿಕ ಕ್ಷೇತ್ರವನ್ನು ಖಾಸಗೀಕರಿಸುತ್ತಿರುವ ಸರಕಾರದನೀತಿಯಿಂದಾಗಿ ದೇಶದ ಸಾರ್ವಭೌಮತೆಗೆ ಅಪಾಯವಿದೆ ಎಂದು ಹೇಳಿದರು. ಹೆಚ್‌ಎಂಎಸ್‌ನ ಜಿಲ್ಲಾ ಅಧ್ಯಕ್ಷ ಸಂಜೀವ ಶೆಟ್ಟಿ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಕೆ. ಮೂಸಬ್ಬ, ಎಐಟಿಯುಸಿ ಮುಂದಾಳು ಬಿ.ವಿಶ್ವನಾಥ ನಾಯಕ, ಜಿಲ್ಲಾ ರೈತ ಸಂಘದ ಮುಂದಾಳು ಕೆ.ಆರ್.ಶ್ರೀಯಾನ್, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಕೆ.ವಸಂತ ಆಚಾರಿ ಮೊದಲಾದವರು ಉಪಸ್ಥಿತರಿದ್ದರು.

ತಾಲೂಕು ಪಂಚಾಯತ್ ಅಧ್ಯಕ್ಷರ ದಬ್ಬಾಳಿಕೆ

ಬ್ರಹ್ಮಾವರ: ಇಲ್ಲಿಗೆ ಸಮೀಪದ ಹಂದಾಡಿಯಲ್ಲಿ ಬಡ ರೈತನಾದ ರಾಮ ಪೂಜಾರಿಯವರ ಜಮೀನಿಗೆ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಅಕ್ರಮ ಪ್ರವೇಶ ಮಾಡಿ ದಾಂಧಲೆ ನಡೆಸಿದ ಉಡುಪಿ ತಾಲೂಕು ಪಂಚಾಯತ್ ಅಧ್ಯಕ್ಷ ಬಿ.ಎಸ್.ಶಂಕರ್ ನಮಾರ್ ಪಂಚಾಯತ್ ಅಧ್ಯಕ್ಷರಾದ ಭೋಜಶೆಟ್ಟಿ ಒಳಗೊಂಡಂತೆ 7 ಜನರ ಮೇಲೆ ಪೋಲೀಸ್ ಕೇಸ್ ದಾಖಲಾಗಿದೆ. ಆದರೂ ಅವರನ್ನು ಬಂಧಿಸದೆ ಇರುವುದನ್ನು ಪ್ರತಿಭಟಿಸಿ ನವಂಬರ್ 29ರಂದು ಬ್ರಹ್ಮಾವರದಲ್ಲಿ ರೈತ ಸಂಘ ಮತ್ತು ಸಿಐಟಿಯುನ ನೂರಾರು ರೈತ-ಕಾರ್ಮಿಕರು ಮೆರವಣಿಗೆ ನಡೆಸಿ ದಬ್ಬಾಳಿಕೆಯನ್ನು ಖಂಡಿಸಿ ಬಸ್ ನಿಲ್ದಾಣದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತ ಸಂಘದ ಕಾಂ.ಡೆವಿಡ್ ಕರ್ಕಡ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಅಬ್ರಹಾಂ ಕರ್ಕಡ, ಸಿಐಟಿಯುನ ಕೆ.ಶಂಕರ್, ಬಡ ರೈತನ ಮೇಲಿನ ಈ ದಬ್ಬಾಳಿಕೆಯನ್ನು ಖಂಡಿಸಿ ಸೂಕ್ತಕ್ರಮಕ್ಕೆಒತ್ತಾಯಿಸಿದರು.

ಎಸ್‌ಎಫ್ಐ ತಾಲೂಕು ಸಮಾವೇಶ

ಮಂಗಳೂರು: ತಾಲೂಕು ಸಮಿತಿಯ ನೇತೃತ್ವದಲ್ಲಿ ನವಂಬರ್ 11,95ರಂದು ಸರಕಾರಿ ನೌಕರರ ಸಭಾ ಭವನದಲ್ಲಿ ತಾಲೂಕು ಮಟ್ಟದ ವಿದ್ಯಾರ್ಥಿಗಳ ಬೃಹತ್ ಸಮಾವೇಶವು ನಡೆಯಿತು. ಈ ಸಮಾವೇಶದಲ್ಲಿ ಮುಂದಿನ ಶೈಕ್ಷಣಿಕ ವರ್ಷಕ್ಕೆ ನೂತನ ಪದಾಧಿಕಾರಿಗಳ ಹಾಗೂ ಕಾರ್ಯಕಾರಿ ಸಮಿತಿಯೊಂದನ್ನುರಚಿಸಲಾಯಿತು. ಅಧ್ಯಕ್ಷರಾಗಿರಾಮದಾಸ್ ಆಯ್ಕೆಗೊಂಡರೆ, ಕಾರ್ಯದರ್ಶಿಯಾಗಿ ಸುನಿಲ್ ಕುಮಾರ್ ಬಜಾಲ್‌ರವರನ್ನು ಸರ್ವಾನುಮತದಿಂದ ಆರಿಸಲಾಯಿತು. ಉಪಾಧ್ಯಕ್ಷರುಗಳಾಗಿ ಆನಂದ ಕೊಂಚಾಡಿ, ಹರೀಶ್ ಬಜಾಲ್, ಕುಮಾರಿರೂಪಾ, ಸಹ ಕಾರ್ಯದರ್ಶಿಗಳಾಗಿ ದೀಪಕ್ ಕುಮಾರ್ ಹಾಗೂ ಜೂಡಿ ವಿವಿಯನ್ ಮೆನೇಸ್‌ರವರನ್ನು ಆರಿಸಲಾಯಿತು.

"ಮಾಧ್ಯಮಗಳಲ್ಲಿ ಅಶ್ಲೀಲತೆ": ಉಗ್ರ ಪ್ರತಿಭಟನೆ

ಸಮೂಹ ಮಾಧ್ಯಮಗಳಾದ ಟಿ.ವಿ. ಪತ್ರಿಕೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ತೀವ್ರವಾಗುತ್ತಿರುವ ಕೀಳು ಅಭಿರುಚಿಯ ಕಾರ್ಯಕ್ರಮ, ಸಾಹಿತ್ಯಗಳನ್ನುಹಾಗೂ ಅಶ್ಲೀಲ ಸಿನಿಮಾಗಳನ್ನು ವಿರೋಧಿಸಿ ಎಸ್.ಎಫ್.ಐ.ನ ಕರ್ನಾಟಕ ರಾಜ್ಯ ವಿದ್ಯಾರ್ಥಿನಿಯರ ಉಪ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯದಾದ್ಯಂತ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ವ್ಯಾಪಕ ಪ್ರತಿಭಟನಾ ಕಾರ್ಯಕ್ರಮಗಳನ್ನುನಡೆಸಲಾಗಿದೆ.

ಬೆಂಗಳೂರು- ಕೋಲಾರ-ತುಮಕೂರು-ಮಂಡ್ಯ-ಕಾರವಾರ-ಮಂಗಳೂರು-ಧಾರವಾಡ-ರಾಯಚೂರು-ಗಂಗಾವತಿ-ಹೊಸಪೇಟೆ-ಬಳ್ಳಾರಿ-ದಾವಣಗೆರೆ-ಗುಲ್ಬರ್ಗ-ಬಿಜಾಪುರ ಮುಂತಾದ ಕಡೆಗಳಲ್ಲಿ ಸಾವಿರಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಈ ಹೋರಾಟದಲ್ಲಿ ಪಾಲ್ಗೊಂಡ ವರದಿಗಳು ಬಂದಿದೆ.

ಬೆಂಗಳೂರು ನಗರದಲ್ಲಿ ವಿವಿಧ ಶಾಲಾ ಕಾಲೇಜುಗಳ ವಿದ್ಯಾರ್ಥಿ, ವಿದ್ಯಾರ್ಥಿನಿಯರು ನಗರ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪ್ರತಿಭಟನಾ ಧರಣಿಯನ್ನು ನಡೆಸಿದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐನ ರಾಜ್ಯ ವಿದ್ಯಾರ್ಥಿನಿಯರ ಉಪ ಸಮಿತಿಯ ಸಂಚಾಲಕಿ ಎಸ್. ಪ್ರಭಾ, ಎಸ್‌ಎಫ್‌ಐನ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್ ಮುಂತಾದವರು ... ಶಿಸಿ ಮಾತನಾಡಿದರು.

ಲೈಂಗಿಕ ಸ್ವೇಚ್ಛಾಚಾರವನ್ನು, ಅನೈತಿಕತೆಯನ್ನು ಪ್ರತಿಪಾದಿಸುವ ಅಶ್ಲೀಲ ವಿದೇಶಿ ಸಿನಿಮಾಗಳು ಯಾವುದೇ ಸೆನ್ಸಾರ್‌ಶಿಪ್ ಇಲ್ಲದೆ ಇಂದು ಪ್ರದರ್ಶಿತವಾಗುತ್ತಿದೆ. ಕೀಳು ಅಭಿರುಚಿಯ ಕಾರ್ಯಕ್ರಮಗಳು ವಿದೇಶಿ ದೂರದರ್ಶನ ಜಾಲದ ಹಲವು ಚಾನಲ್‌ಗಳ ಮೂಲಕ ನಮ್ಮ ಮನೆಗಳಲ್ಲಿ ಪ್ರದರ್ಶಿತವಾಗುತ್ತಿದೆ. ದೇಶಿಯ ದೂರದರ್ಶನವು ಇವುಗಳೊಂದಿಗೆ ಪೈಪೋಟಿ ನಡೆಸಲು ಯತ್ನಿಸುತ್ತಿದೆ. ಅಶ್ಲೀಲ ಪುಸ್ತಕಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಅಶ್ಲೀಲ ಪ್ರವೃತ್ತಿ ಹೆಚ್ಚುತ್ತಿದೆ.

ವಿದ್ಯಾರ್ಥಿ ಯುವಜನರನ್ನು ದಾರಿ ತಪ್ಪಿಸುವ ಈ ಪ್ರವೃತ್ತಿಗೆ ಕೇಂದ್ರ ಸರ್ಕಾರದ ಉದಾರೀಕರಣ ನೀತಿ ಮುಕ್ತ ಅವಕಾಶವನ್ನು ನೀಡಿದ್ದು ತಮ್ಮ ಹಾಗೂ ದೇಶದ ನೈಜ ಸಮಸ್ಯೆಗಳಿಂದ ವಿದ್ಯಾರ್ಥಿ ಯುವಜನರ ಗಮನ ಬೇರೆಡೆ ಸೆಳೆಯುವ ಪ್ರಜ್ಞಾಪೂರ್ವಕ ಪಿತೂರಿ ಇದಾಗಿದ್ದು ಅಮೇರಿಕ ದೇಶದಂತಹ ಸಾಮ್ರಾಜ್ಯಶಾಹಿ ದೇಶಗಳ ಹಿತಾಸಕ್ತಿಯು ಈ ನೀತಿಯ ಹಿಂದಿದೆ. ವಿದ್ಯಾರ್ಥಿ ಸಮುದಾಯ ಇಂತಹ ನೀತಿಗಳ ವಿರುದ್ಧ ಸಂಘಟಿತ ಹೋರಾಟವನ್ನು ನಡೆಸಬೇಕೆಂದು ಈ ಸಂದರ್ಭದಲ್ಲಿ ಮಾತನಾಡಿದ ವಿದ್ಯಾರ್ಥಿ ಮುಖಂಡರು ಕರೆ ನೀಡಿದರು.

ಬೀದಿಬೀದಿಗಳಲ್ಲಿ ಅಂಟಿಸಿರುವ ಅಶ್ಲೀಲ ಭಿತ್ತಿಪತ್ರದ ನಿವಾರಣೆಗೆ ಕ್ರಮಕೈಗೊಳ್ಳಬೇಕು. ಇಂತಹ ಭಿತ್ತಿಪತ್ರ ಅಂಟಿಸುವವರ ವಿರುದ್ಧ ಉಗ್ರ ಕ್ರಮ ಕೈಗೊಳ್ಳಬೇಕು. ಸೆನ್ಸಾರ್‌ಶಿಪ್ ನೀತಿ ಸಮರ್ಪಕವಾಗಬೇಕು. ಅಶ್ಲೀಲ ಸಾಹಿತ್ಯವನ್ನು ನಿಷೇಧಿಸಬೇಕು ಎಂದು ಒತ್ತಾಯಿಸುವ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಯಿತು. ಹಾಗೂ ಇದೇ ಸಂದರ್ಭದಲ್ಲಿ ಅಶ್ಲೀಲ ಪತ್ರಿಕೆಗಳನ್ನು ಸಾಂಕೇತಿಕವಾಗಿ ಸುಡಲಾಯಿತು.

ಬಳ್ಳಾರಿ: ಡಿಸೆಂಬರ್ 15ರಂದು ಎಸ್‌ಎಫ್‌ಐನ ನೇತೃತ್ವದಲ್ಲಿ ಮಾಧ್ಯಮಗಳಲ್ಲಿ ಅಶ್ಲೀಲತೆ ವಿರೋಧಿಸಿ ಭಾರಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಾಯಿತು. ಮೆರವಣಿಗೆಯ ನೇತೃತ್ವವನ್ನು ರಹಮತ್, ಕೆ.ರಮೇಶ್. ಕೆ.ಶ್ರೀನಿವಾಸ್, ಎಚ್.ರಾಮಸ್ವಾಮಿ, ಕೊಟ್ರೇಶ್, ಗಂಗಾಧರ್, ಯು.ಚಂದ್ರಪ್ಪ, ಕೆ.ಈರಣ್ಣ ವಹಿಸಿದ್ದರು. ಮೆರವಣಿಗೆಯು ಸರ್ಕಾರಿ ಬಾಲಕಿಯರ ಕಿರಿಯ ವಿದ್ಯಾಲಯದಿಂದ ಮೋತಿವೃತ್ತದ ಮೂಲಕ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ನಡೆಸಿ ಜಿಲ್ಲಾ ಕಛೇರಿ ತಲುಪಿ ಧರಣಿ ನಡೆಸಲಾಯಿತು. ಜಿಲ್ಲಾಧಿಕಾರಿಯವರಿಗೆ ವಿದ್ಯಾರ್ಥಿನಿಯರಾದ ವೀಣಾ ಮತ್ತು ಪದ್ಮಿನಿಯವರು ಮನವಿ ಅರ್ಪಿಸಿದರು. ಸಭೆಯನ್ನು ಉದ್ದೇಶಿಸಿ SFIನ ಜಿಲ್ಲಾ ಮುಖಂಡರಾದ ಕೆ.ಶ್ರೀನಿವಾಸ್, ಕೆ.ರಮೇಶ್ ಮಾತನಾಡಿದರು. DYFIನ ರಾಜ್ಯ ಕಾರ್ಯದರ್ಶಿಗಳಾದ ಎಸ್.ವೈ. ಗುರುಶಾಂತ್ ಮಾತನಾಡಿದರು. ಎಂ. ಕೊಟ್ರೇಶ್‌ನವರು ವಂದಿಸಿದರು.

ಕಾರವಾರ: ಕೇಂದ್ರ ಸರ್ಕಾರದ ಉದಾರೀಕರಣ ನೀತಿಯಿಂದ ಯಥೇಚ್ಛವಾಗಿ ಮಾಧ್ಯಮಗಳಲ್ಲಿ ಹೆಚ್ಚುತ್ತಿರುವ ಅಶ್ಲೀಲತೆಯನ್ನು ವಿರೋಧಿಸಿ ಎಸ್.ಎಫ್.ಐ ವಿದ್ಯಾರ್ಥಿನಿಯರ ಉಪ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಛೇರಿಎದುರು ಧರಣಿ ನಡೆಸಿ ಸರ್ಕಾರಕ್ಕೆ ಮನವಿ ಅರ್ಪಿಸಲಾಯಿತು. ಜಿಲ್ಲೆಯ ವಿವಿಧ ತಾಲೂಕುಗಳಿಂದ ನೂರಾರು ವಿದ್ಯಾರ್ಥಿನಿಯರು ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸೌಂದರ್ಯಸ್ಪರ್ಧೆ, ಫ್ಯಾಷನ್ ಶೋಗಳ ಹೆಸರಿನಲ್ಲಿ, ಗ್ಲಾಮರ್ ಪ್ರದರ್ಶನದ ನೆಪದಲ್ಲಿ, ಸಿನಿಮಾದಲ್ಲಿ ಅಶ್ಲೀಲತೆಯನ್ನು ಪ್ರದರ್ಶಿಸಲಾಗುತ್ತಿದೆ. ಈ ನೀತಿಯು ವಾಪಸ್ಸಾಗದಿದ್ದರೆ ಉಗ್ರ ಹೋರಾಟಕ್ಕೆ ಸಿದ್ಧರಾಗಲು ಧರಣಿಯನ್ನು ಉದ್ಘಾಟಿಸಿ ಮಾತನಾಡಿದ ಎಸ್‌ಎಫ್‌ಐನ ರಾಜ್ಯಾಧ್ಯಕ್ಷರಾದ ಶಾಂತಾರಾಮ ನಾಯಕ್ ಕರೆ ನೀಡಿದರು.

ಹೋರಾಟಕ್ಕೆ ಬೆಂಬಲಿಸಿ ಡಿವೈಎಫ್ಐ ಜಿಲ್ಲಾ ಮುಖಂಡ ಸುಭಾಷ್ ಕೊಪ್ಪೀಕರ, ಸಮತಾದ ಶಾಂತಿನಾಯಕ್ ಮಾತನಾಡಿದರು.

ಮಂಗಳೂರು: ಮಂಗಳೂರು ನಗರದ ಹೃದಯಭಾಗದಲ್ಲಿ ಕಾರ್ಯಾಚರಿಸುತ್ತಿರುವ ಲಕ್ಕೀ ವಿಡಿಯೋ ಥಿಯೇಟರುಗಳನ್ನು ಮುಚ್ಚಬೇಕೆಂದು ಒತ್ತಾಯಿಸಿ ಎಸ್‌ಎಫ್‌ಐ ಮಂಗಳೂರು ತಾಲೂಕು ಸಮಿತಿ ನೇತೃತ್ವದಲ್ಲಿ ವಿದ್ಯಾರ್ಥಿನಿಯರು ಜಿಲ್ಲಾಧಿಕಾರಿ ಕಛೇರಿ ಎದುರು ಮತ ಪ್ರದರ್ಶನ ನಡೆಸಿ ಮನವಿ ಅರ್ಪಿಸಿದರು.

ಪ್ರತಿಭಟನಾ ಪ್ರದರ್ಶನದ ನೇತೃತ್ವವನ್ನು ಎಸ್‌ಎಫ್‌ಐ ರಾಜ್ಯ ಸಹಕಾರ್ಯದರ್ಶಿ ಎಸ್.ರಾಜ್‌ಕುಮಾರ್, ರೂಪಾಶೆಟ್ಟಿ, ಕುಮಾರಿ ಜ್ಯೂಡಿ ವಿವಿಯನ್ ಮೋನೆಜಸ್, ಸುನಿಲ್ ಕುಮಾರ್ ಬಜಾಲ್, ಎಸ್‌ಎಫ್‌ಐ ಅಧ್ಯಕ್ಷ ... ಮದಾಸ್, ಕುಮಾರಿ ಪ್ರಮೀಳಾ, ಜ್ಯೋತಿ ... ನಾ ಡಿಸೋಜಾ, ಮೊದಲಾದವರು ವಹಿಸಿ...






"ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಬೋಧನೆಗಳ ಮಾರ್ಗದರ್ಶನ ಪಡೆಯುವ ಕಾರ್ಮಿಕ ವರ್ಗ ಮತ್ತು ಅದರ ಕ್ರಾಂತಿಕಾರಿ ಮುಂದಳದ ನಾಯಕತ್ವದಲ್ಲಿ ನಮ್ಮೀ ಮಹಾ ದೇಶವಾದ ಭಾರತ ಒಂದು ವಿಜಯೀ ಜನತಾ ಪ್ರಜಾಪ್ರಭುತ್ವವಾಗಿ ರೂಪುಗೊಳ್ಳುವುದು ಮತ್ತು ಸಮಾಜವಾದದ ಪಥದಲ್ಲಿ ಮುನ್ನಡೆಯುವುದು"


ಜುಲೈ 1996

ಭಾನು		7	14	21	28
ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	31
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	

13(1910) ಪ್ರಮೋದ್ ದಾಸ್ ಗುಪ್ತಾ ಜನ್ಮದಿನ
17(1928) ಕಮ್ಯುನಿಸ್ಟ್ ಅಂತರಾಷ್ಟ್ರೀಯದ 6ನೇ ಮಹಾಧಿವೇಶನ
23(1942) ಭಾರತ ಕಮ್ಯುನಿಸ್ಟ್ ಪಕ್ಷದ ಮೇಲಿನ ನಿಷೇಧ ರದ್ದು
25(1935) ಕಮ್ಯುನಿಸ್ಟ್ ಅಂತರಾಷ್ಟ್ರೀಯದ 7ನೇ ಮಹಾಧಿವೇಶನ



ಕಾಂ.ಪಿ. ಸುಂದರಯ್ಯ 1.5.1913–19.5.1985



ಕಾಂ.ಮುಝಫ್ಫರ್ "ಅಹ್ಮದ್"

ಜನವರಿ 1996

1959) ಕ್ಯೂಬಾ ಕ್ರಾಂತಿ
1989) ಸಫ್ದರ್ ಹಶ್ಮಿ ಕೊಲೆ
1992) ಪಕ್ಷದ 14ನೇ ಮಹಾಧಿವೇಶನ
978) ತ್ರಿಪುರಾದಲ್ಲಿ ಮೊದಲ ಎಡರಂಗ ಸರಕಾರ
1924) ಲೆನಿನ್ ನಿಧನ
1897) ಸುಭಾಷ್ ಚಂದ್ರಬೋಸ್ ಜನನ
1930) ಮೊದಲ ಸ್ವಾತಂತ್ರ್ಯ ದಿನಾಚರಣೆ
950) ಭಾರತ ಗಣತಂತ್ರದ ಘೋಷಣೆ
982) ಪಕ್ಷದ 11ನೇ ಮಹಾಧಿವೇಶನ

ಭಾನು		7	14	21	28
ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	31
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	

1(1919) ಕಮ್ಯುನಿಸ್ಟ್ ಅಂತರಾಷ್ಟ್ರೀಯ ಮೊದಲ ಮಹಾಧಿವೇಶನ
5(1953) ಜೆ.ವಿ.ಸ್ಟಾಲಿನ್ ನಿಧನ
8(1917) ಅಂತರ್ರಾಷ್ಟ್ರೀಯ ಮಹಿಳಾ ದಿನ
14(1883) ಕಾರ್ಲ್ ಮಾರ್ಕ್ಸ್ ನಿಧನ
23(1977) ಎ.ಕೆ.ಜಿ. ನಿಧನ
23(1931) ಭಗತ್ ಸಿಂಗ್ ಹುತಾತ್ಮರಾದ ದಿನ
27(1977) ಆಂತರಿಕ ತುರ್ತು ಪರಿಸ್ಥಿತಿ ವಾಪಸ್ಸು
28(1943) ಕಯ್ಯೂರು ಹುತಾತ್ಮರ ದಿನ

ಮಾರ್ಚ್ 1996

ಭಾನು	31	3	10	17	24
ಸೋಮ		4	11	18	25
ಮಂಗಳ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

1(1904) ಎ.ಕೆ.ಜಿ. ಜನ್ಮ ದಿನ
1(1948) ಚೀಣಾ ಜನತಾ ಗಣತಂತ್ರ ಸ್ಥಾಪನೆ
2(1869) ಗಾಂಧೀಜಿ ಜನ್ಮ ದಿನ
3(1945) ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ(WFTU) ಸ್ಥಾಪನೆ
16(1928) ಚೀಣಾದಲ್ಲಿ 'ಲಾಂಗ್ ಮಾರ್ಚ್' ಆರಂಭ
17(1920) ತಾಷ್ಕೆಂಟಿನಲ್ಲಿ ಸಿಪಿಐ ಸ್ಥಾಪನೆ
31(1964) ಪಕ್ಷದ 7ನೇ ಮಹಾಧಿವೇಶನ ಕಲ್ಕತ್ತ


ಅಕ್ಟೋಬರ್ 1996


ಭಾನು		6	13	20	27
ಸೋಮ		7	14	21	28
ಮಂಗಳ	1	8	15	22	29
ಬುಧ	2	9	16	23	30
ಗುರು	3	10	17	24	31
ಶುಕ್ರ	4	11	18	25	
ಶನಿ	5	12	19	26	

...ಬ್ರುವರಿ 1996

...ನು		4	11	18	25
...ೋಮ		5	12	19	26
...ಂಗಳ		6	13	20	27
...ಧ		7	14	21	28
...ು	1	8	15	22	29
	2	9	16	23	
	3	10	17	24	

2(1943) ಸ್ಟಾಲಿನ್‌ಗ್ರಾಡ್‌ನಲ್ಲಿ ಸೋವಿಯತ್ ಸೇನೆಯ ವಿಜಯ
3(1930) ವಿಯಟ್ನಾಂ ಕಮ್ಯುನಿಸ್ಟ್ ಪಕ್ಷ ಸ್ಥಾಪನೆ
18(1946) 'ರಿನ್' ಭಾರತೀಯ ನಾವಿಕರ ಬಂಡಾಯ
19(1946) ಬ್ರಿಟಿಷ್ ಸರ್ಕಾರ ನೇಮಿಸಿದ ಕೆಬಿನೆಟ್ ಮಿಶನ್ ಆಗಮನ
20(1947) ಜೂನ್‌ನೊಳಗೆ ಭಾರತ ಬಿಡುವುದಾಗಿ ಬ್ರಿಟಿಷ್ ಪ್ರಧಾನಿ ಅಟ್ಲಿ ಘೋಷಣೆ
27(1931) ಚಂದ್ರಶೇಖರ್ ಆಝಾದ್ ಬ್ರಿಟಿಷ್ ಪೋಲೀಸ್ ಗುಂಡಿಗೆ ಬಲಿ
28(1948) ಪಕ್ಷದ 2ನೇ ಮಹಾಧಿವೇಶನ







1(1914) ಚೀಣಾದ ಕೆಂಪು ಸೇನೆ ಸ್ಥಾಪನೆ
4(1914) ಮೊದಲ ಮಹಾಯುದ್ಧ ಆರಂಭ
5(1889) ಮುಝಫ್ಫರ್ ಅಹ್ಮದ್ ಜನನ
5(1895) ಫ್ರೆಡರಿಕ್ ಎಂಗೆಲ್ಸ್ ನಿಧನ
6(1945) ಹಿರೋಶಿಮಾ ಮೇಲೆ ಆಟಂಬಾಂಬ್
9(1942) ಕ್ವಿಟ್ ಇಂಡಿಯಾ ದಿನ
9(1945) ನಾಗಾಸಾಕಿಯ ಮೇಲೆ ಆಟಂಬಾಂಬ್
15(1936) ಎಐಎಸ್‌ಎಫ್ ಸ್ಥಾಪನೆ
15(1947) ಭಾರತಕ್ಕೆ ಸ್ವಾತಂತ್ರ್ಯ ದಿನ
24(1991) ಗೋರ್ಬಚೇವ್ ರಾಜೀನಾಮೆ. ಸಿಪಿಎಸ್‌ಯು ವಿಸರ್ಜನೆಯ ಘೋಷಣೆ

ಆಗಸ್ಟ್ 1996

ಭಾನು		4	11	18	25
ಸೋಮ		5	12	19	26
ಮಂಗಳ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	31







ಕಾಂ.ಎಂ. ಬಸವಪುನ್ನಯ್ಯ 14.12.1914–12.4.1992

2(1978) ಪಕ್ಷದ 10ನೇ ಮಹಾಧಿವೇಶನ
3(1995) ಪಕ್ಷದ 15ನೇ ಮಹಾಧಿವೇಶನ
5(1957) ಕೇರಳದಲ್ಲಿ ಮೊದಲ ಕಮ್ಯುನಿಸ್ಟ್ ಮಂತ್ರಿಮಂಡಳ
6(1958) ಪಕ್ಷದ5ನೇಮಹಾಧಿವೇಶನ
6(1990) ಬಿ.ಟಿ.ಆರ್. ನಿಧನ
7(1961) ಪಕ್ಷದ6ನೇ ಮಹಾದಿವೇಶನ
11(1936) ಎಐಕೆಎಸ್ ರಚನೆ
12(1992) ಎಂ.ಬಸವಪುನ್ನಯ್ಯ ನಿಧನ
13(1919) ಜಾಲಿಯನ್ ವಾಲಾಬಾಗ್ ಹತ್ಯಾಕಾಂಡ
19(1956) ಪಕ್ಷದ4ನೇ ಮಹಾಧಿವೇಶನ
22(1870) ಲೆನಿನ್ ಜನ್ಮದಿನ
30(1975) ವಿಯೆಟ್ನಾಂ ವಿಮೋಚನೆ


ಏಪ್ರಿಲ್					1996
ಭಾನು		7	14	21	28
ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	



ಕಾಂ.ಪ್ರಮೋದ್ ದಾಸ್ ಗುಪ್ತಾ 13.7.1910–29.11.1982

ಮೇ					1996
ಭಾನು		5	12	19	26
ಸೋಮ		6	13	20	27
ಮಂಗಳ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	31
ಶನಿ	4	11	18	25	

1(1913) ಪಿ.ಸುಂದರಯ್ಯ ಜನನ
1(1927) ಭಾರತದಲ್ಲಿ ಮೊದಲ ಮೇ ದಿನ
2(1945) ಜರ್ಮನ್ ಸೋವಿಯತ್ ಸೇನೆಯ ವಶ
4(1921) ಚೀಣಾದ ಭೂ ಆಂದೋಲನ ಆರಂಭ
5(1993) ಕಲ್ಕತ್ತೆಯಲ್ಲಿ ಅಂತರಾಷ್ಟ್ರೀಯ ವಿಚಾರ ಸಂಕಿರಣ
10(1857) ಪ್ರಥಮಸ್ವಾತಂತ್ರ್ಯ ಯುದ್ಧ ಆರಂಭ
19(1890) ಹೊ ಚಿ ಮಿನ್ ಜನ್ಮ ದಿನ
19(1985) ಪಿ.ಸುಂದರಯ್ಯ ನಿಧನ
23(1930) ಪಕ್ಷದ ಮೊದಲ ಮಹಾಧಿವೇಶನ
30(1970) ಸಿಐಟಿಯು ಸ್ಥಾಪನೆ



ಕಾಂ.ಬಿ.ಟಿ. ರಣದಿವೆ 19.12.1904–6.4.1990

ಸೆಪ್ಟೆಂಬರ್					1996
ಭಾನು	1	8	15	22	29
ಸೋಮ	2	9	16	23	30
ಮಂಗ	3	10	17	24	
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

1(1939) ಎರಡನೇ ಮಹಾಯುದ್ಧ ಆರಂಭ
1(1946) ಭಾರತದಲ್ಲಿರಾಷ್ಟ್ರೀಯಸರಕಾರರಚನೆ
2(1969) ಹೋ ಚಿ ಮಿನ್ಹ್ ನಿಧನ
3(1866) ಮಾರ್ಕ್ಸ್‌ರ ನೇತೃತ್ವದಲ್ಲಿ ಮೊದಲ ಅಂತರ್ರಾಷ್ಟ್ರೀಯಅಧಿವೇಶನ
9(1976) ಮಾವೋ ನಿಧನ
12(1948) ಕೊರಿಯಾ ಗಣತಂತ್ರ ಸ್ಥಾಪನೆ
13(1948) ತೆಲಂಗಾಣಾ ಹೋರಾಟಗಾರರ ವಿರುದ್ಧ ಪೋಲೀಸ್ ಕಾರ್ಯಾಚರಣೆ
20(1908) ಪಿ. ರಾಮಮೂರ್ತಿ ಜನನ
23(1933) ದಿಮಿತ್ರೋವ್ ಚಾರಿತ್ರಿಕ ಫ್ಯಾಸಿಸಂ-ವಿರೋಧಿ ಭಾಷಣ
23(1973) ಪಾಬ್ಲೋ ನೆರೂದ ಕೊಲೆ
27(1907) ಭಗತ್ ಸಿಂಗ್ ಜನನ
28(1864) ಮೊದಲಅಂತರ್ರಾಷ್ಟ್ರೀಯದಸ್ಥಾಪನೆ




ಕಾಂ.ಎ.ಕೆ. ಗೋಪಾಲನ್ 1.10.1904–22.3.1977


1(1956) ಭಾಷಾವಾರು ಪ್ರಾಂತ್ಯಗಳ ರಚನೆ
5(1922) ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ 4ನೇ ಮಹಾಧಿವೇಶನ
5(1945) ಕೆಂಪು ಕೋಟೆಯಲ್ಲಿ ಆಜಾದ್ ಹಿಂದ್ ಸೇನೆಯ ಬಂಧಿಗಳ ವಿಚಾರಣೆ
7(1917) ರಶ್ಯಾದಲ್ಲಿ ಮಹಾನ್ ಅಕ್ಟೋಬರ್ ಕ್ರಾಂತಿ
28(1820) ಫ್ರೆಡರಿಕ್ ಎಂಗೆಲ್ಸ್ ಜನ್ಮ ದಿನ
29(1982) ಪ್ರಮೋದ್ ದಾಸ್ ಗುಪ್ತಾ ನಿಧನ
30(1994) ನೇಪಾಳದಲ್ಲಿ ಮೊದಲ ಕಮ್ಯುನಿಸ್ಟ್ ಸರಕಾರ

ನವಂಬರ್					1996
ಭಾನು		3	10	17	24
ಸೋಮ		4	11	18	25
ಮಂಗ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

ಡಿಸೆಂಬರ್					1996
ಭಾನು	1	8	15	22	29
ಸೋಮ	2	9	16	23	30
ಮಂಗ	3	10	17	24	31
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

2(1984) ಭೋಪಾಲ್ ಅನಿಲ ದುರಂತ
14(1914) ಎಂ. ಬಸವಪುನ್ನಯ್ಯ ಜನ್ಮ ದಿನ
15(1987) ಪಿ. ರಾಮಮೂರ್ತಿ ನಿಧನ
18(1973) ಮುಝಫ್ಫರ್ ಅಹ್ಮದ್ ನಿಧನ
19(1904) ಬಿ.ಟಿ.ಆರ್. ಜನ್ಮ ದಿನ
21(1879) ಜೆ.ವಿ. ಸ್ಟಾಲಿನ್ ಜನ್ಮ ದಿನ
23(1968) ಪಕ್ಷದ 8ನೇ ಮಹಾಧಿವೇಶನ
25(1985) ಪಕ್ಷದ 12ನೇ ಮಹಾಧಿವೇಶನ
26(1893) ಮಾವೋ ಜನನ
27(1953) ಪಕ್ಷದ 13ನೇ ಮಹಾಧಿವೇಶನ
27(1978) ಸಾಲ್ವಿಯಾ ಪ್ಲೀನಂ
30(1922) ಸೋವಿಯತ್ ಒಕ್ಕೂಟ ಸ್ಥಾಪನೆ






ಕಾಂ.ಪಿ. ರಾಮಮೂರ್ತಿ 20.9.1908–15.12.1987

9(1968) ಡಿವೈಎಫ್ಐ ಸ್ಥಾಪನೆ
10(1943) ಕಮ್ಯುನಿಸ್ಟ್ ಅಂತರಾಷ್ಟ್ರೀಯ ವಿಸರ್ಜನೆ
22(1921) ಕಮ್ಯುನಿಸ್ಟ್ ಅಂತರಾಷ್ಟ್ರೀಯದ 3ನೇ ಮಹಾಧಿವೇಶನ
24(1976) ವಿಯೆಟ್ನಾಂ ಏಕೀಕರಣ
25(1975) ಆಂತರಿಕ ತುರ್ತು ಪರಿಸ್ಥಿತಿ ಘೋಷಣೆ
27(1972) ಪಕ್ಷದ 9ನೇಮಹಾಧಿವೇಶನ

ಜೂನ್						1996
ಭಾನು	30	2	9	16	23	
ಸೋಮ		3	10	17	24	
ಮಂಗ		4	11	18	25	
ಬುಧ		5	12	19	26	
ಗುರು		6	13	20	27	
ಶುಕ್ರ		7	14	21	28	
ಶನಿ	1	8	15	22	29	

ಕರ್ನಾಟಕದ ಶ್ರಮಜೀವಿಗಳ ವಾರಪತ್ರಿಕೆ

ಐಕ್ಯರಂಗ





ತ್ರಿಪುರಾಕ್ಕೆ ಇನ್ನೂ 18 ಬಟಾಲಿಯನ್: ಈಗ ಮೀಸಲು ಪಡೆಗಳೇ ಇಟ್ಟಿರುವ ಬೇಡಿಕೆ

ತ್ರಿಪುರಾದಲ್ಲಿ ಭಯೋತ್ಪಾದಕರ ಹಲ್ಲೆಗಳು ಹಾಗೂ ಕೇಂದ್ರ ಸರ್ಕಾರ ಅರೆ-ಮಿಲಿಟರಿ ಪಡೆಗಳನ್ನು ವಾಪಾಸು ತಗೊಂಡಿರುವ ಹಿನ್ನೆಲೆಯಲ್ಲಿ ಅಗರ್ತಲಾದಲ್ಲಿ ದು ಉನ್ನತ ಮಟ್ಟದ ಸಭೆ ನಡೆಯಿತು. ಇದರಲ್ಲಿ ಮುಖ್ಯಮಂತ್ರಿ ದಶರಥ್ ದೇಬ್, ಉಪ ಮುಖ್ಯಮಂತ್ರಿ ಬೈದನಾಥ್ ಮುಜುಂದಾರ್, ಗೃಹ ಮಂತ್ರಿ ಸಮರ ಚೌಧುರಿ ಹಾಗೂ ಉನ್ನತ ಅಧಿಕಾರಿಗಳು ಭಾಗವಹಿಸಿದ್ದರು. ಇದರಲ್ಲಿ ರಾಜ್ಯದಲ್ಲಿ ಕಾನೂನು ಮತ್ತು ವ್ಯವಸ್ಥೆಯ ಸಮೀಕ್ಷೆ ನಡೆಸಲಾಯಿತು.

ಸರಕಾರ ಬಂಡುಕೋರರನ್ನು ಎದುರಿಸಲು ಅಂಗೀಕರಿಸಿರುವ ಕ್ರಮಗಳ ಹಾಗೂ ಅರೆ-ಸೈನಿಕ ಪಡೆಗಳನ್ನು ನೆಲೆಗೊಳಿಸುವ ವಿಧಾನಗಳ ವಿಶ್ಲೇಷಣೆಯನ್ನು ಮುಖ್ಯಮಂತ್ರಿಗಳು ಮುಂದಿಟ್ಟರು, ಈ ವೇಳೆಗೆ ಒಂದು ಕುತೂಹಲಕಾರಿ ಬೆಳವಣಿಗೆ ನಡೆದಿತ್ತು. ರಾಜ್ಯದಲ್ಲಿನ ಕೇಂದ್ರ ಮೀಸಲು ಪೋಲೀಸ್ ಪಡೆ ಒಂದು ಕಾರ್ಯಾಚರಣೆಯ ಯೋಜನೆ ರೂಪಿಸಿ ತಮಗೆ ಇನ್ನೂ 18 ಬಟಾಲಿಯನ್‌ಗಳನ್ನು ಕಳಿಸಬೇಕೆಂದು ಅತ್ಯುನ್ನತ ಅಧಿಕಾರಿಗಳನ್ನು ಕೇಳಿದೆ. ತ್ರಿಪುರಾ ಎಡರಂಗ ಸರಕಾರವೂ ಕೇಂದ್ರವನ್ನು ಕೇಳುತ್ತಿದ್ದುದು ಇದನ್ನೇ. ಅದು ರಾಜ್ಯದಲ್ಲಿ ಇನ್ನೂ ಇಪ್ಪತ್ತು ಬಟಾಲಿಯನ್‌ಗಳು ಬೇಕು ಎಂದು ಬಹಳ ದಿನಗಳಿಂದ ಕೇಳುತ್ತಿದೆ.

ಈ ಉನ್ನತ ಮಟ್ಟದ ಸಭೆಯ ನಂತರ ಅಲ್ಲಿ ನಡೆದ ಚರ್ಚೆಗಳ ವಿವರಗಳನ್ನು ನೀಡುತ್ತಾ ಸಮರ್ ಚೌಧುರಿ ಈ ರಾಜ್ಯದಲ್ಲಿ ಮೂವತ್ತು ಕಂಪನಿಗಳಷ್ಟು ಅರೆ-ಮಿಲಿಟರಿ ಪಡೆಗಳಿವೆ, ಆದರೆ ನಿಜವಾಗಿಯೂ ಬೇಕಾದ 60 ಕಂಪನಿಗಳು ಎಂದು ಹೇಳಿದರು. ಈಗಿರುವ ಪಡೆಗಳನ್ನು ಕೇಂದ್ರ ಸರಕಾರ ಹಿಂತೆ[gedu]ಕೊಳ್ಳುತ್ತಿರುವುದರಿಂದ ರಾಜ್ಯದಲ್ಲಿ ಶಾಂ[ತಿ] ಮತ್ತು ಸಾಮರಸ್ಯದ ವಾತಾವರಣವನ್ನು ನಾ[ಶ] ಮಾಡಲು ಕಟಿಬದ್ಧರಾಗಿರುವ ಉಗ್ರಗಾಮಿಗಳಿಗೆ ಇನ್ನಷ್ಟು ಪ್ರೋತ್ಸಾಹ ನೀಡುತ್ತದೆ ಎಂದು ಅವರು ಹೇಳಿದರು.

ನಗರಸಭೆ ಉಪ ಚುನಾವಣೆ:ಸಿಪಿಐ(ಎಂ)ಗೆ 3 ಸ್ಥಾನ

ಡಿಸೆಂಬರ್ 10 ರಂದು ನಡೆದ 5 ನಗರಸಭಾ ಉಪ ಚುನಾವಣೆಯಲ್ಲಿ 3 ರಲ್ಲಿ ಸಿಪಿಐ(ಎಂ) ಅಭ್ಯರ್ಥಿ ಛಾಯಾ ಬ್ಯಾನರ್ಜಿ ಕಾಂಗ್ರೆಸ್(ಐ)ನ ಪ್ರತಿಸ್ಪರ್ಧಿಯನ್ನು 6300 ಮತಗಳಿಂದ ಸೋಲಿಸಿದರು. ಜೂನ್‌ನಲ್ಲಿ ನಡೆದ ಚುನಾವಣೆಗಳಲ್ಲಿ ಸಿಪಿಐ(ಎಂ) ಈ ಸ್ಥಾನವನ್ನು 2631 ಮತಗಳಿಂದ ಗೆದ್ದಿತ್ತು.

ಸಾಲ್ಟ್‌ಲೇಕ್‌ನ ಬಿದಾನ್‌ನಗರ್ ನಗರ ಸಭೆಯು ಉಪ ಚುನಾವಣೆಯಲ್ಲಿ ಕಾಂಗ್ರೆಸ್(ಐ) ಕೇವಲ 96 ಮತಗಳಿಂದ ಗೆದ್ದಿದೆ. ಅಲ್ಲಿ ಕಳೆದ ಜೂನ್‌ನಲ್ಲಿ ಅಭ್ಯರ್ಥಿಯೊಬ್ಬರ ಸಾವಿನಿಂದಾಗಿ ಚುನಾವಣೆ ನಡೆದಿರಲಿಲ್ಲ. ತಮ್ಮ ಅಭ್ಯರ್ಥಿಯ ಗೆಲುವಿನ ನಂತರ ಕಾಂಗ್ರೆಸ್(ಐ) ಪುಂಡಾಟದಲ್ಲಿ ತೊಡಗಿದರು. ಇಬ್ಬರು ಸ್ಥಳೀಯ ಸಮಿತಿ ಸದಸ್ಯರೂ ಸೇರಿದಂತೆ 5 ಮಂದಿ ಸಿಪಿಐ(ಎಂ) ಕಾರ್ಯಕರ್ತರು ಬಾಂಬ್ ಸಿಡಿತದಿಂದ ಗಾಯಗೊಂಡರು.

ಉತ್ತರದ 24 ಪರಗಣ ಜಿಲ್ಲೆಯ ಖರ್ದಾ ನಗರಸಭೆ ಉಪ ಚುನಾವಣೆಯಲ್ಲಿ ಸಿಪಿಐ(ಎ) ಒಂದು ಸ್ಥಾನವನ್ನು ಪಕ್ಷೇತರರಿಂದ ಪಡೆದರ ನಾಡಿಯಾ ಜಿಲ್ಲೆಯ ಗಣೇಶ್‌ಪುರ್‌ನಲ್ಲಿ ತಾನು ಹಿಂದೆ ಗೆದ್ದಿದ್ದ ಸ್ಥಾನವನ್ನು ಉಳಿಸಿಕೊಂಡಿದೆ. ಬಾಂಕುರಾ ಜಿಲ್ಲೆಯ ಸೋನಾಮುಖಿಯಲ್ಲಿ ಕಾಂಗ್ರೆಸ್(ಐ) ತನ್ನ ಸ್ಥಾನ ಉಳಿಸಿಕೊಂಡಿದೆ.

(ಐ.ಎನ್.ಎನ್.)

ಬಿಜೆಪಿ-ಶಿವಸೇನೆ ಸರಕಾರದ ಮೇಲೆ 'ಬೇಳೆ' ಭ್ರಷ್ಟಾಚಾರದ ಆಪಾದನೆ

ಸುಪ್ರೀಂಕೋರ್ಟಿನ ತೀರ್ಪಿನ ಸಂತೋಷ, ಸಂಭ್ರಮದಲ್ಲಿರುವಾಗಲೇ ಮಹಾರಾಷ್ಟ್ರದ ಜೋಷಿ ಸರಕಾರ ತೊಗರಿ ಬೇಳೆ, ಕಡಲೇಬೇಳೆ ಖರೀದಿ ಭ್ರಷ್ಟಾಚಾರದ ಆಪಾದನೆಗೊಳಗಾಗಿದೆ. ರಾಜ್ಯದ ಆಹಾರ ಮತ್ತು ನಾಗರಿಕ ಪೂರೈಕೆ ಮಂತ್ರಿ ಶ್ರೀಮತಿ ಶೋಬಾತಾಯಿ ಫಡ್ನವಿಸ್‌ರ ರಾಜೀನಾಮೆಗೆ ಒತ್ತಾಯ ಬರುತ್ತಿದೆ. ಶಿವಸೇನೆಯ ಬಾಳಠಾಕ್ರೆ ಬೃಹತ್ ಸಭೆಯೊಂದರಲ್ಲಿ ಮಾತನಾಡುತ್ತಾ ಮಂತ್ರಿಯವರು ತಪ್ಪಿತಸ್ಥರೆಂದು ಕಂಡುಬಂದರೆ ಅವರನ್ನ ಕಿತ್ತುಹಾಕಲಾಗುವುದುಎಂದರಂತೆ.

ಕಡಲೇಬೇಳೆ, ತೊಗರಿಬೇಳೆಯನನು ಮಾರುಕಟ್ಟೆ ಬೆಲೆಗಳಿಗಿಂತ ಹೆಚ್ಚಿನ ಬೆಲೆಯಲ್ಲಿ ಸರಕಾರ ಕೊಂಡು ಕಜಾನೆಗೆ ಕೋಟಿಗಟ್ಟಲೆ ರೂಪಾಯಿ ನಷ್ಟವಾಗಿದೆ ಎಂಬುದು ಅವರ ಮೇಲಿನ ಆಪಾದನೆ. ಹಣ ಬಿಜೆಪಿಯ ಮುಂಬೈ 'ಮಹಾಧಿವೇಶನ'ದ ದುಂದು-ವೆಚ್ಚಕ್ಕಾಗಿ ಎಂಬ ಮಾತೂ ಕೇಳಬರುತ್ತಿದೆ. ಇದರಲ್ಲಿ ಇನ್ನೊಬ್ಬ ಬಿಜೆಪಿ ಪಿಡಬ್ಲ್ಯುಡಿ ಮಂತ್ರಿ ನಿತಿನ್ ಗಡ್ಕರಿ ಕೂಡಾ ಶಾಮೀಲಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಮುಂಬೈ ವಿಧಾನಸಭೆಯಲ್ಲಿ ಇದನ್ನೆತ್ತಿದಾಗ ಶಿವಸೇನೆ ಮುಖ್ಯಮಂತ್ರಿಗಳು ಎರಡು ಬಿಜೆಪಿ ಮಂತ್ರಿಗಳ ನೆರವಿಗೆ ಬಾರದ್ದೂ ಬಿಜೆಪಿ ಮಂತ್ರಿಗಳಲ್ಲಿ ಅಸಮಾಧಾನ ಉಂಟು ಮಾಡಿದೆ ಎಂದೂ ಹೇಳಲಾಗಿದೆ.

ಮಂತ್ರಿಗಳ ಪ್ರಕಾರ ರಾಜ್ಯದ ದೇಶದ ವ್ಯವಸ್ಥೆಯಲ್ಲಿ ಹಂಚಲು ರಾಷ್ಟ್ರೀಯ ಬಳಕೆದಾರ ಸಹಕಾರ ಒಕ್ಕೂಟದಿಂದ 40 ಸಾವಿರ ಟನ್ ಕಡಲೇಬೇಳೆಯನ್ನು ಕ್ವಿಂಟಾಲಿಗೆ 1450 ರೂ.ನಂತೆ ಖರೀದಿಸಲಾಯಿತು. ದಿಲ್ಲಿ, ರಾಜಾಸ್ತಾನ, ಮಧ್ಯಪ್ರ ದೇಶಗಳಲ್ಲಿ ಮಾ[ರು]ಕಟ್ಟೆ ಬೆಲೆ ಆಗ 900 ರೂ. ಇತ್ತು. ಅದೇ ರೀತಿ ಮಾರುಕಟ್ಟೆಯಲ್ಲಿ ತೊಗರಿ ಬೇಳೆ ಬೆಲೆ 24.26 ರೂ. ಇದ್ದಾಗ ಸರಕಾರ 2[..] ರೂ.ನಲ್ಲಿ ಖರೀದಿಸಿತು ಎಂದು ಆಪಾದಿ[ಸ]ಲಾಗಿದೆ. ಆದರೆ ಸರಕಾರ ಒಕ್ಕೂಟದಿಂದ ಖರೀದಿಸುವಂತೆ ಕೇಂದ್ರ ಸರಕಾರ ಶಿಫಾರಸು ಮಾಡಿದ್ದರಿಂದ ತಾನು ಹಾಗೆ ಖರೀದಿಸಿದುದಾಗಿ ಮಂತ್ರಿಗಳು ಹೇಳುತ್ತಿದ್ದಾರೆ. [ಸ]ರಕಾರಕ್ಕೆ ಮುಜುಗರ ತಪ್ಪಿಸಲು ಮಂತ್ರಿ[ಯ] ರಾಜೀನಾಮೆಯೇ ಸೂಕ್ತ ಎಂದು ಶಿವಸೇನೆಯ ಎಂಎಲ್‌ಎಗಳು ಹೇಳುತ್ತಿದ್ದಾರೆ. ಬಿಜೆಪಿ ಎಂಎಲ್‌ಎಗಳಿಗೂ ಈ ವ್ಯವಹಾರದಲ್ಲಿ ಸಂಶಯವಿದೆಯಂತೆ.

ಸಿಕ್ಕಿಬಿದ್ದ 'ಆನಂದ್ ಬಝಾರ್' ಪತ್ರಿಕಾ

ಪಶ್ಚಿಮ ಬಂಗಾಳದ ಅತ್ಯಂತ ಹೆಚ್ಚು ಪ್ರಸಾರದ 'ಆನಂದ್ ಬಝಾರ್' ಪತ್ರಿಕೆಯ ವಿರುದ್ಧ ಪಶ್ಚಿಮ ಬಂಗಳ ಸರಕಾರ ಪತ್ರಿಕಾ ಮಂಡಳಿ(ಪ್ರೆಸ್ ಕೌನ್ಸಿಲ್)ಗೆ ಬಲವಾದ ಪ್ರತಿಭಟನೆ ಸಲ್ಲಿಸಿದೆ. ನಾಡಿಯಾ ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಚುಚ್ಚು ಮದ್ದು ನೀಡಿದ ನಂತರ ಒಂದು ಮಗು ಸತ್ತು ಹೋಯಿತು ಎಂದು ಈ ಪತ್ರಿಕೆ ಮುಖಪುಟದಲ್ಲಿ ಸುದ್ದಿ ಹಾಕಿತ್ತು. ಇದು ನಿಯಮಿತವಾಗಿ ಹೀಗೆ ಸುಳ್ಳು ಕಥೆಗಳನ್ನು ಹರಡಿಸುವ ಹವ್ಯಾಸ ಬೆಳೆಸಿಕೊಂಡಂತಹ ಪತ್ರಿಕೆ. ಆದರೆ ಈ ಬಾರಿ ಅದು ಸಿಕ್ಕಿಬಿದ್ದಿದೆ. ಆ ಮಗುವಿನ ಮರಣೋತ್ತರ ಪರೀಕ್ಷೆಯನ್ನು ತಕ್ಷಣ ನಡೆಸಲು ಆಜ್ಞೆ ನೀಡಲಾಯಿತು. ಆ ಮಗು ಕಳೆದ ಏಳು ತಿಂಗಳಿಂದ ಶ್ವಾಸಕೋಸದ ತೊಂದರೆಗಳಿಂದ ನರಳುತ್ತಿತ್ತು. ಆದರಿಂದಾಗಿ ಆಕಸ್ಮಿಕ ಸಾವು ಸಂಭವಿಸಿತು ಎಂದು ಕಂಡು ಬಂದಿದೆ.

ಕಾಲಿಗಂಜ್ ಬ್ಲಾಕ್‌ನ ಕಾಂತಿಪುರ ಗ್ರಾಮದಲ್ಲಿ ಆ ಮಗುವಿಗೆ ಡಿಸೆಂಬರ್ 9 ರಂದು ಪಲ್ಸ್ ಪೋಲಿಯೋ ಚುಚ್ಚು ಮದ್ದು ನೀಡಲಾಯಿತು. ಪಲ್ಸ ಪೋಲಿಯೋ ಲಸಿಕೆ ಹಾಕುವ ದೇಶ ವ್ಯಾಪ್ತಿ ಕಾರ್ಯಕ್ರಮದ ಅಂಗವಾಗಿ ಆ ಹಳ್ಳಿಯಲ್ಲಿ 283 ಮಕ್ಕಳಿಗೆ ಲಸಿಕೆ ಹಾಕಲಾಯಿತು. ಸಾವಿಗೀಡಾದ ಮಗುವಿಗೆ ನೀಡಿದ ಲಸಿಕೆಯಿಂದಲೇ ಇನ್ನೂ 19 ಹಸುಳೆಗಳಿಗೆ ಚುಚ್ಚು ಮದ್ದು ನೀಡಲಾಯಿತು. ಅವೆಲ್ಲಾ ಚೆನ್ನಾಗಿಯೇ ಇವೆ. ಲಸಿಕೆ ನೀಡಿದ ನಂತರ ಅಲ್ಲಿ ಹಲವು ಮಕ್ಕಳು ಅಸ್ವಸ್ಥಗೊಂಡವು ಎಂದು ಆನಂದ ಬಝಾರ್ ವರದಿ ಮಾಡಿತ್ತು. ಇದು ಸಂಪೂರ್ಣ ಸುಳ್ಳು ಎಂದು ಸಾಬೀತಾಗಿದೆ. ಪಾಲಕರಲ್ಲಿ ಭಯದ ಬಾವನೆ ಹುಟ್ಟಿಸುವ ದುರುದ್ದೇಶದಿಂದ ಈ ಕಥೆ ಕಟ್ಟಲಾಗಿದೆ. ರಾಜ್ಯ ಆರೋಗ್ಯ ಕಮಿಶನರ್ ಪ್ರೆಸ್ ಕೌನ್ಸಿಲ್‌ಗೆ ಬರೆದ ಖಾರವಾದ ಪತ್ರದಲ್ಲಿ ಇಂತಹ ತಲೆಕೆಟ್ಟ ಪತ್ರಗಾರಿಕೆಯ ನೈತಿಕತೆಯನ್ನು, ಅದೂ ಪೋಲಿಯೋ ಬಗ್ಗೆ ಶಿಕ್ಷಣ ನೀಡುವ ಒಂದು ರಾಷ್ಟ್ರವ್ಯಾಪಿ ಕಾರ್ಯಕ್ರಮದ ವಿರುದ್ಧ ವರ್ತಿಸುವುದರಲ್ಲಿನ ನೈತಿಕತೆಯನ್ನು ಪ್ರಶ್ನಿಸಿದ್ದಾರೆ.

ರಾಷ್ಟ್ರೀಯರಂಗದ ಧೋರಣೆಗಳಿಗೆ ವಿರುದ್ಧವಾಗಿ ರಾಷ್ಟ್ರಪತಿ ಆಳ್ವಿಕೆಗೆ ಎನ್.ಟಿ.ಆರ್.ಒತ್ತಾಯ!

ತೆಲುಗುದೇಶಂ ಅಧ್ಯಕ್ಷ ಎನ್.ಟಿ.ರಾಮರಾವ್ ಆಂಧ್ರಪ್ರದೇಶದಲ್ಲಿ ಸಂವಿಧಾನದ 356ನೇ ಕಲಮಿನ ಪ್ರಕಾರ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಬೇಕೆಂದು ಕೇಳಿರುವುದು ಪ್ರಜಾಪ್ರಭುತ್ವ ವಿರೋಧಿ ಎಂದು ಸಿಪಿಐ(ಎಂ)ರಾಜ್ಯ ಕಾರ್ಯದರ್ಶಿ ಕೆ.ಸತ್ಯನಾರಾಯಣ ಹೇಳಿದ್ದಾರೆ.

ಪತ್ರಿಕೆಗಳಿಗೆ ನೀಡಿದ ಒಂದು ಹೇಳಿಕೆಯಲ್ಲಿ ಅವರು ಎನ್.ಟಿ.ಆರ್.ರವರ ಕೇಳಿಕೆ ಪ್ರಜಾಪ್ರಭುತ್ವ-ವಿರೋಧಿ ಮಾತ್ರವಲ್ಲ, ಅದು ತೀರಾ ಆಕ್ಷೇಪಣಾರ್ಹ ಹಾಗೂ ರಾಷ್ಟ್ರೀಯ ರಂಗದ ಧೋರಣೆಗಳಿಗೆ ವಿರುದ್ಧವಾದದ್ದು ಎಂದು ಅವರು ಹೇಳಿದ್ದಾರೆ. ವಿಧಾನಸಭೆಯ ಬಹುಮತ ಪಡೆದಿರುವ ಮುಖಂಡನಿಗೆ ಮಾತ್ರ ರಾಜ್ಯದ ಮುಖ್ಯಮಂತ್ರಿಯ ಸ್ಥಾನ ನೀಡಲು ಸಾಧ್ಯ. ಈ ಹಿಂದೆ ಆಗಸ್ಟ್‌ನಲ್ಲಿ ಅವರ ಪಕ್ಷ ಒಡೆದಾಗ ಎನ್.ಟಿ.ಆರ್. ವಿಧಾನಸಭೆಯನ್ನು ರದ್ದು ಮಾಡುವ ಕೋರಿಕೆಯಿಟ್ಟಿದ್ದರು. ಆದರೆ ರಾಜ್ಯಪಾಲರು ಜಾಣತನದಿಂದ ಹಾಗೂ ಸೂಕ್ತವಾಗಿಯೇ ಆ ಕೋರಿಕೆಯನ್ನು ತಳ್ಳಿ ಹಾಕಿ ವಿಧಾನಸಭೆಯಲ್ಲಿ ಬಹುಮತ ಸಾಬೀತು ಮಾಡಿ ಎಂದು ಕೇಳಿದರು. ಅದು ತನಗೆ ಸಾಧ್ಯವಿಲ್ಲೆಂದು ತಿಳಿದು ರಾಜೀನಾಮೆ ನೀಡಿದರು. ಬಹುಮತದ ಬೆಂಬಲ ಪಡೆದ ಎನ್.ಚಂದ್ರಬಾಬು ನಾಯ್ಡು ವಿಧಾನಸಭೆಯ ವಿಶ್ವಾಸ ಪಡೆದು ಮುಖ್ಯ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡರು. ನಂತರ ವಾಸ್ತವತೆಗಳನ್ನು ಅರಿಯದೆ ಹಾಗೂ ನಿರಾಸೆಯ ಹೊಡೆತವನ್ನು ತಾಳಲಾರದೆ ಚಂದ್ರಬಾಬುರವರು ತೆಲುಗುದೇಶಂ ವಿಧಾನಮಂಡಲ ಪಕ್ಷದ ಮುಖಂಡರಾದುದೇ ಅಸಿಂಧು ಎಂದು ರಾಜ್ಯಪಾಲರಿಗೆ ಹೇಳಿದರು. ನಂತರ ಅವರು ಕೋರ್ಟಿಗೆ ಹೋದರು. ನ್ಯಾಯಾಲಯ ನಾಯ್ಡು ಸರಕಾರದ ಕಾರ್ಯನಿರ್ವಹಣೆಗೆ ತಡೆಯಾಜ್ಞೆ ನೀಡಬೇಕೆಂದು ಎನ್.ಟಿ.ಆರ್. ಕೋರಿಕೆಯನ್ನು ಮನ್ನಿಸಲಿಲ್ಲ. ಆ ಬಗ್ಗೆ ತೀರ್ಪು ಇನ್ನೂ ಬಂದಿಲ್ಲ. ಆದರೆ ಈ ತೀರ್ಪಿಗೆ ಕಾಯದೆ ಅವರು ಮತ್ತೊಮ್ಮೆ ಚಂದ್ರಬಾಬುನಾಯ್ಡುರವರ ಕಾನೂನು ಬದ್ಧ ಸರಕಾರವನ್ನು ವಜಾ ಮಾಡಬೇಕು ಎಂದು ರಾಜ್ಯಪಾಲರಿಗೆ ಹೇಳಿದ್ದಾರೆ. ಇದು ರಾಜಕೀಯ ದೊಂಬರಾಟವಲ್ಲದೇ ಬೇರೇನೂ ಅಲ್ಲ ಎಂದಿರುವ ಸಿಪಿಐ(ಎಂ) ಮುಖಂಡರು ಈ ಎಲ್ಲಾ ದೊಂಬರಾಟಗಳು ಕೊನೆಗೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರಕ್ಕೆ ಮರಳಲು ನೆರವಾಗುತ್ತದೆ ಎಂಬುದನ್ನು ಅರಿತಂತಿಲ್ಲ ಎಂದಿದ್ದಾರೆ.

ಈ ಹಿಂದೆ ತಾನು ಕಾಂಗ್ರೆಸ್(ಐ) ಹಾಗೂ ಬಿಜೆಪಿಯನ್ನು ಖಂಡತುಂಡವಾಗಿ ವಿರೋಧಿಸುತ್ತೇನೆ ಎಂದಿರುವ ಇವರು ಈಗ ಪರೋಕ್ಷವಾಗಿ ಮುಂಬರುವ-ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಪಕ್ಷದ ಚಾನ್ಸ್ ಹೆಚ್ಚಿಸಲು ಪ್ರಯತ್ನಿಸುತ್ತಿದ್ದಾರೆ ಎಂದ ಈ ಸಿಪಿಐ(ಎಂ) ಮುಖಂಡರು ಎನ್.ಟಿ.ಆರ್. ಈಗ ವಿಳಂಬವಾಗಿಯಾದರೂ ಪರಿಸ್ಥಿತಿಯನ್ನು ಅರಿಯುತ್ತಾರೆ, ಸರಕಾರವನ್ನು ಅಸ್ಥಿರಗೊಳಿಸುವ ಯಾವುದೇ ಕೆಲಸ ಮಾಡುವುದಿಲ್ಲ ಎಂದು ಆಶಿಸಿದ್ದಾರೆ.

ಗುಜರಾತ್ ಬಿಜೆಪಿಯಲ್ಲಿ ಇನ್ನೊಂದು ಬಿರುಗಾಳಿ!

ಗುಜರಾತ್ ಬಗ್ಗೆ ಸಹಾನುಭೂತಿ ಇರುವ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ಪ್ರಕಾರ ಈ ಬಿರುಗಾಳಿ ಸೃಷ್ಟಿಯಾಗುತ್ತಿದೆ. ಬಿಜೆಪಿ ರಾಜ್ಯ ಅಧ್ಯಕ್ಷ ಹಾಗೂ ಎಂಪಿ ಕಾಶಿಲಾಲ ರಾಣಾರ ಸ್ವಂತ ಪಟ್ಟಣ ಸೂರತ್‌ನಲ್ಲಿ ಬಿಜೆಪಿ ಸಭೆಯೊಂದನ್ನು ಬಿಜೆಪಿ ಕಾರ್ಯದರ್ಶಿಗಳೇ ಅಸ್ತವ್ಯಸ್ತಗೊಳಿಸಿದ ಬಗ್ಗೆ ಅವರಿಗೆ ಬಹಳ ಸಿಟ್ಟುಬಂದಿದೆಯಂತೆ. ಗುಜರಾತ್‌ನ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಜಾಣ್ಮೆಯಿಂದ ನಿರ್ವಹಿಸಿದರೆನ್ನಲಾದ ಅವರು ಮುಂದಿನ ಪ್ರಧಾನಿ ಪಟ್ಟದ ಅಭ್ಯರ್ಥಿಯಾಗಲು ಇದೂ ಒಂದು ಸಾಧನೆ ಕಾರಣವೆನ್ನಲಾದ ಅಟಲ್ ಬಿಹಾರಿ ವಾಜಪೇಯಿಯವರು, ಈ ಸಭೆಯಲ್ಲಿ ಕಂಡು ಬಂದ ಬಿಜೆಪಿ ಕಾರ್ಯಕರ್ತರ ವರ್ತನೆಯಿಂದ ಆತಂಕಗೊಂಡಿ ದ್ದಾರೆ.

ಇಂತಹ ಘಟನೆ ಒಂದೇ ಅಲ್ಲ. ಗುಜರಾತಿನ ಪತ್ರಿಕೆಗಲ್ಲಿ ಒಂದಿಲ್ಲೊಂದು ಬಿಜೆಪಿ ಗುಂಪಿನ ಹೇಳಿಕೆಗಳು. ಅದಕ್ಕೆ ಇನ್ನೊಂದು ಗುಂಪಿನ ಪ್ರತಿಹೇಳಿಕೆಗಳು ಸರ್ವೇಸಾಮಾನ್ಯವಾಗಿದೆ. ಅಧಿಕಾರಿಗಳನ್ನು ನೇಮಿಸುವುದರಿಂದ ಹಿಡಿದು ಪಕ್ಷದ ಸಮಾರಂಭದವರೆಗೆ ಪ್ರತಿ ವಿಷಯದಲ್ಲೂ ಈ ಗುಂಪುಗಳ ನಡುವೆ ಬಿನ್ನಾಭಿಪ್ರಾಯಗಳಿದ್ದು ಅವು ಸಾರ್ವಜನಿಕವಾಗಿ ಪ್ರಕಟವಾಗುತ್ತಿವೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿಖ್ರ ಅಂಗನಪಾ[..] ಬರೆಯುತ್ತಾರೆ. ಮುಂದಿನ ಲೋಕಸಭಾ ಚುನಾವಣೆಗಳಾಗುವವರೆಗಂತೂ ಈ ಗುಂಪುಗಾರಿಕೆ ಸಮಸ್ಯೆಗೆ ಪರಿಹಾರ ಸಿಗದು ಎಂದು ಬಿಜೆಪಿ ಸಂಸತ್ ಸದಸ್ಯರೊಬ್ಬರ ಅಭಿಪ್ರಾಯ. ಆದರೆ ಚುನಾವಣೆ ಸಮೀಪಿಸುತ್ತಿದ್ದಂತೆ ಪರಿಸ್ಥಿತಿ ಇನ್ನೂ ಹದಗೆಡಬಹುದು-ಪಾರ್ಟಿ ಟಿಕೆಟ್‌ಗಳಿಗಾಗಿ ಕಿತ್ತಾಟದಲ್ಲಿ ಎಂದು ವರದಿಗಾರ ಹೇಳುತ್ತಾರೆ.

ರಾಜಾಸ್ತಾನ: ಶೇಖಾವತ್ ಮೇಲೆ ಆರೋಪ

ಕಳೆದ ವಾರದಲ್ಲಿ ಪ್ರಕಟವಾಗಿರುವಂತೆ ಸುಪ್ರೀಂಕೋರ್ಟ್ 1993ರ ವಿಧಾನಸಭಾ ಚುನಾವಣೆಗಳಲ್ಲಿ ಕೋಮುವಾದಿ ಭಾವೋದ್ವೇಗ ಬಡಿದೆಬ್ಬಿಸುವ ಭ್ರಷ್ಟ ಚುನಾವಣೆ ಆಚರಣೆ ಅಪರಾಧ ಮಾಡಿದ್ದಾರೆಂಬ ಬಗ್ಗೆ ಆರಂಭಿಕ ಸಂಕೇತಗಳಿರುವುದರಿಂದ ಈ ಬಗ್ಗೆ ಮುಖ್ಯಮಂತ್ರಿ ಶೇಖಾವತ್ ವಿರುದ್ಧ ಚುನಾವಣಾ ಅರ್ಜಿಯ ಮರುವಿಚಾರಣೆ ನಡೆಸಬೇಕು ಎಂದು ರಾಜಾಸ್ತಾನದ ಹೈಕೋರ್ಟಿಗೆ ಆದೇಶ ನೀಡಿದೆ. ಹೈಕೋರ್ಟ್ ಶೇಖಾವತ್‌ರು ಈ ಅಪರಾಧ ಗೈದ ಬಗ್ಗೆ ಪುರಾವೆಗಳಿಲ್ಲ ಎಂದು ಆ ಅರ್ಜಿಯನ್ನು ಹಿಂದೆ ರದ್ದು ಮಾಡಿತ್ತು. ಸುಪ್ರೀಂಕೋರ್ಟಿನ ಈ ತೀರ್ಪಿನ ನಂತರ ನೈತಿಕ ಆಧಾರದಲ್ಲಿ ಶೇಖಾವತ್ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್(ಐ) ರಾಜಾಸ್ತಾನ ಪ್ರದೇಶಾಧ್ಯಕ್ಷ ಒತ್ತಾಯಿಸಿದ್ದಾರೆ. ಯಾವಾಗಲೂ ನೀತಿಯ ಮಾತಾಡುವ ಬಿಜೆಪಿಯ ನೀತಿಗಳೇ ಬೇರೆ ಎಂದು ಎಂಬುದಂತೂ ಎಲ್ಲರಿಗೂ ಅರ್ಥವಾಗಿದೆ./

ಪ.ಬಂಗಾಳ: ಕಾಂಗ್ರೈನ ನಿಲ್ಲದ ಆಂತರಿಕ ಕಿತ್ತಾಟ

ಎಲ್ಲಿ ಅದಿಕಾರವೋ ಅಲ್ಲಿ ಕಾಂಗ್ರೆ ಕಿತ್ತಾಟ-ಇದು ಪಶ್ಚಿಮ ಬಂಗಾಳದಲ್ಲಂತೂ ಮತ್ತೆ-ಮತ್ತೆ ಕಂಡು ಬರುತ್ತಿರುವ ದೃಶ್ಯ. ಈಗ ಅದು ಇತ್ತೀಚಿಗೆ ಚುನಾಯಿತವಾದ ನಗರಸಭೆಗಳಲ್ಲಿ ಕಂಡು ಬರುತ್ತಿದೆ. ಕಲ್ಕತ್ತಾ ಮಹಾನಗರ ಸಭೆ ತಮ್ಮ ಕೈಗೆ ಬಂದು ಮೇಯರ್ ಆಗುತ್ತಾರೆ ಎಂದು ಕಾಂಗ್ರೈನವರು ಡಂಗುರ ಸಾರಿದ್ದ ಶ್ರೀಮತಿ ಪದ್ಮಾ ಖಿಶ್ರಗೀರ್ ವಿರುದ್ಧ ಮಮತಾ ಬ್ಯಾನರ್ಜಿ ಬೆಂಬಲಿಗರು ಬಂಡೆದ್ದು ಯಥಾ ಪ್ರಕಾರ ಕಾಂಗ್ರೆ ಸಭೆಯಲ್ಲಿ ಕೂಗಾಟ, ಜಗ್ಗಾಟ, ವಾಕೌಟ್‌ಗಳು ನಡೆದಿವೆ. ಶ್ರೀಮತಿ ಖಿಶ್ರಗೀರ್ ಈಗ ಕಲ್ಕತ್ತಾ ಮಹಾನಗರಪಾಲಿಕೆಯಲ್ಲಿ ವಿರೋಧ ಪಕ್ಷದ ಮುಖಂಡರು. ಆದರೆ ಮತದಾನ ನಡೆದರೆ ಅವರಿಗೆ 68 ಕಾಂಗ್ರೆ ಸದಸ್ಯರಲ್ಲಿ ಐವರ ಬೆಂಬಲವೂ ಸಿಗಲಿಕ್ಕಿಲ್ಲ ಎಂದು ಕಾಂಗ್ರೆ ಕಾರ್ಪೊರೇಟರರೊಬ್ಬರ ಅಭಿಪ್ರಾಯ. ಈ ಕಿತ್ತಾಟ ಯಥಾ ಪ್ರಕಾರ ಕಾಂಗ್ರೆಸ್ ಅಧ್ಯಕ್ಷ ನರಸಿಂಹರಾಯರವರೆಗೂ ಹೋಗಿದೆ. ಮಿಡ್ನಾಪುರ ಮುನಿಸಿಪಾಲಿಟಿಯ ಕಾಂಗ್ರೆಸ್(ಐ) ಬೋರ್ಡ್ ಎಂದು ಕಾಂಗ್ರೆಸ್ಸಿಗರ 'ಬಂಡಾಯ'ದಿಂದಾಗಿ ಪತನಗೊಂಡು ಅಲ್ಲಿ ಹೊಸ ಅಧ್ಯಕ್ಷರ ಚುನಾವಣೆ ನಡೆಯಬೇಕಾಗಿ ಬಂದಿದೆ.

ಇನ್ನೊಂದು ನಗರಸಭೆ-ಚಿನ್ಸುರಾ ಹೂಗ್ಲಿಯಲ್ಲಿ ಮಮತಾ ಬ್ಯಾನರ್ಜಿ ಬೆಂಬಲಿಗ ಕೌನ್ಸಿಲರುಗಳು ಕಾಂಗ್ರೆಸ್(ಐ) ಕಮೀಶನರ್‌ಗೇ ಸವಾಲು ಹಾಕಿದ್ದಾರಂತೆ. ಆತ ಮಮತಾ ಬೆಂಬಲಿಗರು 'ಸಿಪಿಐ(ಎಂ)ನ ಚಮಚಾ'ಗಳು ಎಂದಿದ್ದಾರಂತೆ!

ಜಿಲ್ಲಾಧಿಕಾರಿ ನಿರ್ಲಕ್ಷ್ಯ: ಚುನಾಯಿತ ಪ್ರತಿನಿಧಿಗಳ ವಿನೂತನ ಪ್ರತಿಭಟನೆ

ಕೇರಳದ ತ್ರಿಶೂರ್‌ನಲ್ಲಿ ಜಿಲ್ಲಾ ಪಂಚಾಯತುಗಳ ಚುನಾಯಿತ ಪ್ರತಿನಿಧಿಗಳು ತಮ[ಗೆ] ಕಾರ್ಯನಿರ್ವಹಿಸಲು ಒಂದು ಜಾಗ ಕೊ[ಡ]ಲಾರದ ಸರಕಾರದ ಸಮರ್ಥತೆಗೆ ಪ್ರತಿಭಟನೆ ವ್ಯಕ್ತಪಡಿಸಲು ಒಂದು ಹೊಸ ದಾ[ರಿ] ಕಂಡುಕೊಂಡಿದ್ದಾರೆ. ಜಿಲ್ಲಾ ಕಲೆಕ್ಟರ್‌ರವರ ಕಛೇರಿಯಲ್ಲಿ ಕಲೆಕ್ಟರ್ ರವರ ಕೋಣೆ[ಯ] ಎದುರೇ ತಮ್ಮ ಕಾರ್ಯ ನಡೆಸಲಾರಂಭಿಸಿದ್ದಾರೆ. ಜಿಲ್ಲಾ ಕಲೆಕ್ಟರ್ ವರ ಕೋಣೆ[ಗೆ] ಹೋಗುವ ದಾರಿಯಲ್ಲಿ ಕುರ್ಚಿಗಳು, ಮೇಜುಗಳನ್ನು ಸಾಲಾಗಿಟ್ಟು ಚುನಾಯಿತ ಪ್ರತಿನಿಧಿಗಳ ಹೆಸರಿನ ಫಲಕಗಳನ್ನು ಇಡಲಾಯಿತು. ಜಿಲ್ಲಾ ಮಂಡಳಿಗೊಂದು ಕಛೇರಿ ಮಾಡಲು ಜಾಗ ಕೊಡಿ ಎಂದು ಪದೇ-ಪದೇ ಕೇಳಿದರೂ ಕಲೆಕ್ಟರ್ ಅದನ್ನು ಕಿವಿಗೇ ಹಾಕಿಕೊಳ್ಳದ್ದರ ವಿರುದ್ಧ ಇದೊಂದು ಸಾಂಕೇತಿಕ ಪ್ರತಿಭಟನೆಯಾಗಿತ್ತು.

ಎಡರಂಗದ ಬಹುಮತವಿರುವ ಜಿಲ್ಲಾ ಪಂಚಾಯತ್ ಅಧಿಕಾರಿಗಳ ಮಜ[..] ತಲೆಬಾಗಲು ಸಿದ್ಧವಿರಲಿಲ್ಲ. ಆದ್ದರಿಂದ ಡಿಸೆಂಬರ್ 4ರಿಂದ ಕಲೆಕ್ಟರ್(ಜಿಲ್ಲಾಧಿಕಾರಿ) ಕಛೇರಿಯಿಂದಲೇ ಕಾರ್ಯನಿರ್ವಹಿಸುತ್ತಿ[ದ್ದಾರೆ].

ಭ್ರಷ್ಟಾಚಾರದ ವಿರುದ್ಧ ಕಾಂಗ್ರೈ ಆಂದೋಲನ!

ವಿಚಿತ್ರ ಸುದ್ದಿಯೆನ್ನುತ್ತೀರಾ? ಆಕ್ರಮಣವೇ ಆತ್ಮರಕ್ಷಣೆಯ ಅತ್ಯುತ್ತಮ ಉಪಾಯವೆಂಬಂತೆ ಕಾಂಗ್ರೈ ಮುಖಂಡತ್ವ ಈ ತಂತ್ರ ಅನುಸರಿಸಲು ನಿರ್ಧರಿಸಿದೆಯಂತೆ. ವಿರೋಧ ಪಕ್ಷಗಳ ಸರಕಾರಗಳಿರುವ ರಾಜ್ಯಗಳಲ್ಲಿ ಆ ರಾಜ್ಯ ಸರಕಾರಗಳ ಭ್ರಷ್ಟಾಚಾರಗಳ ವಿರುದ್ಧ ತೀವ್ರ ಚಳುವಳಿ ನಡೆಸುವುದೇ ಈ ತಂತ್ರ. ಟೆಲಿಕಾಂ ಹಗರಣವನ್ನು ವಿರೋಧ ಪಕ್ಷಗಳು ಕಾಂಗ್ರೆಸ್(ಐ)ನ ಸ್ಥಿರತೆ, ಸಾಮರಸ್ಯ ಮತ್ತು ಅಬಿವೃದ್ಧಿಯ ಚುನಾವಣಾ ಘೋಷಣೆಯನ್ನು ನಿರರ್ಥಕಗೊಳಿಸಬಹುದೆಂಬ ಭಯದಿಂದ ಈ ತಂತ್ರ ರೂಪಿಸಲಾಗಿದೆಯಂತೆ. ಆದ[ರೆ] ಹಗರಣಗಳಲ್ಲಿ ದಾಖಲೆಗಳ ಮೇ[ಲೆ] ದಾಖಲೆ ಸೃಷ್ಟಿಸಿರುವ ಒಂದು ಪಕ್ಷ [ಇದ]ರಲ್ಲಿ ಯಶಸ್ವಿಯಾಗುತ್ತದೆಯೇ? ಕಾಂಗ್ರೆಸ್ಸಿಗರಲ್ಲಿಯೂ ಹಲವರಿಗೆ ಈ ಬಗ್ಗೆ [ಸಂಶ]ಯವಿದೆ.

ಪೂರ್ವ ಯುರೋಪಿನ ಹೆಚ್ಚಿನ ದೇಶಗಳಲ್ಲಿ ಹಿಂದಿನ ಸೋವಿಯತ್ ಒಕ್ಕೂಟದ ದೇಶಗಳಲ್ಲಿ ಸಮಾಜವಾದ-ವಿರೋಧಿಗಳ ಸೋಲಿನ ನಂತರ ಈಗ ರಶ್ಯಾದಲ್ಲೇ, ಅದೂ ಕುಡುಗೋಲು, ಸುತ್ತಿಗೆಯ ಕೆಂಬಾವುಟವನ್ನು ಹಿಡಿದೇ ಕಮ್ಯುನಿಸ್ಟರು ದೊಡ್ಡ ಶಕ್ತಿಯಾಗಿ ಗೆದ್ದು ಬಂದಿರುವುದು ಬಂಡವಾಳಶಾಹಿಗಳನ್ನು, ಅವರ ಪ್ರಚಾರಕರನ್ನು ದಿಗಿಲುಗೊಳಿಸಿದೆ.

ಯೆಲ್ಟ್‌ಸಿನ್ ಮೈಮುಟ್ಟಿಕೊಳ್ಳುವಂತೆ ರಶ್ಯದ ಜನತೆಯ ಓಟಿನ ಏಟು

-ಸೀತಾರಾಂ ಯೆಚೂರಿ

ನಾಲ್ಕು ವರ್ಷಗಳ ಹಿಂದೆ ಜಗತ್ತು "ಕಮ್ಯುನಿಸಂನ ಸಾವ"ನ್ನು ಆಚರಿಸಿತ್ತು. ಉನ್ಮಾದದಿಂದ ಸೈದ್ಧಾಂತಿಕ ಆಕ್ರಮಣ ಹರಿಯಬಿಡಲಾಗಿತ್ತು. ಬಂಡವಾಳಶಾಹಿಯ ವರ್ಗದ್ವೇಷಕ್ಕೆ ಅನುಗುಣವಾದ ಪ್ರತೀಕಾರ ಭಾವನೆಯಿಂದ ಸಾಮ್ರಾಜ್ಯಶಾಹಿ ಪ್ರಚಾರ ಯಂತ್ರ ವಿಷ ಬಾಣಗಳ ಮಳೆಯನ್ನೇ ಸುರಿಸಿತು. ಇದು "ಇತಿಹಾಸದ ಅಂತ್ಯ" ಎಂದು ಹೇಳಲಾಯಿತು. "ಬಂಡವಾಳಶಾಹಿ ಚಿರಂತನ" ಎಂದು ಅರಚಿಕೊಂಡರು, ಸಾಮ್ರಾಜ್ಯಶಾಹಿಯ ಅನುವರ್ತಿಗಳು ಹಾಗೂ ಅದರ ಬಾಡಿಗೆ ಪ್ರಚಾರಕರು. ಹೀಗೆ ಆರಂಭವಾಯಿತು ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆಯ ಪ್ರಕ್ರಿಯೆ. ಕಮ್ಯುನಿಸ್ಟರನ್ನು ಹೀಗಳೆಯಲಾಯಿತು, ದೇಶಭ್ರಷ್ಟರಾಗಿರುವ ಪ್ರಯತ್ನ ನಡೆಯಿತು, ಕಿರುಕುಳ, ದಮನ ಎಲ್ಲವನ್ನೂ ಅವರು ಎದುರಿಸಬೇಕಾಯಿತು. ಮಾರ್ಕ್ಸ್‌ವಾದ ಈಗಲೂ ಸುಸಂಬದ್ಧ, ಮಾನ್ಯ ಎಂದು ದೃಢವಾಗಿ ಅದನ್ನು ಎತ್ತಿಹಿಡಿಯುತ್ತಲೇ ಮುಂದುವರಿದ ಸಿಪಿಐ(ಎಂ)ನಂತಹವರನ್ನು ಬೂರ್ಜ್ವಾ ಮಾಧ್ಯಮಗಳು ಹೀಗಳೆದವು, ಇಂತವರು ಹೆಚ್ಚೆಂದರೆ ಹಳಸಲು ಮಂದಿ ಎಂದೆಲ್ಲಾ ಹೇಳಿದರು.

ಆದರೆ ಸಿಪಿಐ(ಎಂ) ಇವು ಯಾವುದಕ್ಕೂ ಜಗ್ಗದೆ ಒತ್ತಿ ಒತ್ತಿ ಹೇಳುತ್ತಲೇ ಬಂತು-ದಶಕಗಳ ಕಾಲ ಸಮಾಜವಾದದ ಸಾಮಾಜಿಕ ಭದ್ರತೆಯನ್ನು ಅನುಭವಿಸಿದವರು, ಎಂದೆಂದೂ ಬಂಡವಾಳಶಾಹಿ ಹೇರುವ ಅಭದ್ರತೆ, ಅಪಮಾನಗಳನ್ನು ಕಾಣದ ಜನಗಳು ಬಂಡವಾಳದ ಚಂಚಲ ಆಳ್ವಿಕೆಯನ್ನು ಒಪ್ಪಲಾರರು ಎಂದು ಹೇಳುತ್ತಲೇ ಬಂತು. ಇಲ್ಲ, ಈ ಜನಗಳು ಸಮಾಜವಾದದಿಂದ ತಮ್ಮ "ವಿಮೋಚನೆ"ಯಿಂದ ಹರ್ಷೋಲ್ಲಾಸದಿಂದಿದ್ದಾರೆ ಎಂದು ಸಾರಿದರು ಬಂಡವಾಳಶಾಹೀ ಪ್ರಚಾರಕರು.

ಆದರೆ ಈಗ ಪ್ರತಿಗಾಮಿ ಶಕ್ತಿಗಳು ದಿಗಿಲುಗೊಂಡಿವೆ. ಇಷ್ಟು ಬೇಗನೇ ಜನರ ಪ್ರತಿಭಟನೆ ಅಭಿವ್ಯಕ್ತಿಗೊಳ್ಳಲಾರಂಭಿಸುತ್ತದೆ ಎಂದು ಕೆಲವು ಕಮ್ಯುನಿಸ್ಟರು ಕೂಡಾ ನಿರೀಕ್ಷಿಸಿರಲಿಲ್ಲ! ಮೊದಲು ಉಕ್ರೇನ್, ಬೈಲೋರಶ್ಯಾ, ಲಿಥುವೇನಿಯಾ, ಲ್ಯಾಟಿವಿಯಾ ಹಾಗೂ ಅರ್ಝರ್‌ಬೈಜಾನ್‌ಗಳಲ್ಲಿ ಕ್ರಾಂತಿ-ವಿರೋಧಿಗಳು ಚುನಾವಣಾ ಸೋಲುಂಡರು. ನಂತರ ಬಂತು ಹಂಗರಿಯಲ್ಲಿ, ಆ ಮೇಲೆ ಬಲ್ಗೇರಿಯಾದಲ್ಲಿ, ಈಗ ಪೋಲೆಂಡಿನಲ್ಲಿ ಹಿಂದಿನ ಕಮ್ಯುನಿಸ್ಟರ ಜಯ. ಒಂದು ದಶಕಕ್ಕೂ ಹೆಚ್ಚು ಕಾಲ ಕಮ್ಯುನಿಸ್ಟ್-ವಿರೋಧದ ಪ್ರತೀಕವಾಗಿದ್ದ, ಸಾಮ್ರಾಜ್ಯಶಾಹಿಯ ಅಚ್ಚುಮೆಚ್ಚಿನ ಲೆಕ್ ವಲೇಸಾ ಅಪಮಾನಕಾರೀ ಸೋಲುಣ್ಣಬೇಕಾಯಿತು. ಮಂಗೋಲಿಯಾ, ಅರ್ಮೇನಿ ಮತ್ತಿತರ ಕಡೆಗಳಿಂದಲೂ ಹಿಂದಿನ ಕಮ್ಯುನಿಸ್ಟರ ಮುನ್ನಡೆ ಸಾಧನೆಯ ಸುದ್ದಿಗಳು ಬಂದವು. ಆದರೂ ಸಾಮ್ರಾಜ್ಯಶಾಹಿ ಮಾಧ್ಯಮಗಳು ನೋಡಿ ರಶ್ಯಾ ಇನ್ನೂ ಅಜೇಯವಾಗಿ ನಿಂತಿವೆ ಎಂದವು. ಈ ಚುನಾವಣೆಗಳಲ್ಲಿ ಕಮ್ಯುನಿಸ್ಟರನ್ನು ತಿರಸ್ಕರಿಸಿ ಎಂದು ಕಳಕಳಿಯಿಂದ ಕೇಳಲಾಯಿತು, ಒತ್ತಡ ಹಾಕಲಾಯಿತು, ಕೊನೆಗೆ ಬೆದರಿಕೆಗಳನ್ನೂ ಒಡ್ಡಲಾಯಿತು. ಆದರೆ ಫಲಿತಾಂಶ ಈಗ ಎಲ್ಲರ ಮುಂದಿದೆ.

ಯೆಲ್ಟ್‌ಸಿನ್‌ಗಿದು ಚಾಟಿಯೇಟು

ಸಂಶಯ, ಭಯಗಳಿದ್ದರೂ ರಶ್ಯಾದ ಜನತೆ ದೊಡ್ಡ ಸಂಖ್ಯೆಯಲ್ಲಿ ಬಂದು ಯೆಲ್ಟ್‌ಸಿನ್ ಮತ್ತು ಆತನ 'ಸುಧಾರಣೆ'ಗಳಲ್ಲಿ ಒಂದು ಚಾಟಿಯೇಟಿನಂತಹ ಸೋಲುಣ್ಣಿಸಿದ್ದಾರೆ. ಇದುವರೆಗೆ ದೊರೆತ ಫಲಿತಾಂಶಗಳ ಪ್ರಕಾರ ರಶ್ಯನ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷ ಸುಮಾರು 23% ಮತ ಪಡೆದು ಇತರೆಲ್ಲರಿಗಿಂತಲೂ ಬಹಳ ಮುಂದಿದೆ. ನಂತರದ ಸ್ಥಾನ ಅತಿ ರಾಷ್ಟ್ರೀಯವಾದಿ ಝಿರ್ನೋವಸ್ಕಿಯ ಲಿಬರಲ್ ಡೆಮಾಕ್ರಾಟಿಕ್ ಪಾರ್ಟಿಗೆ(11.2% ಮತ) ದೊರೆತಿದೆ. ಪ್ರಧಾನಮಂತ್ರಿ ಚೆರ್ನೋಮಿರ್ಡಿನ್‌ರ ಸರಕಾರ-ಪರವಾದ "ರಶ್ಯಾ ನಮ್ಮ ಮನೆ" ಎಂಬ ಹೆಸರಿನ ಪಕ್ಷಕ್ಕೆ 9.5% ಮತ ಹಾಗೂ ಉದಾರವಾದಿ ಯಾಬ್ಲೋಕ್ ಪಕ್ಷಕ್ಕೆ 8.4% ಮತ ದೊರೆತಿದೆ. ಚುನಾವಣೆಯಲ್ಲಿ ಸ್ಪರ್ಧಿಸಿದ 43 ಪಕ್ಷಗಳಲ್ಲಿ ಇವು ನಾಲ್ಕನ್ನು ಬಿಟ್ಟು ಬೇರೆ ಯಾರೂ ಕನಿಷ್ಠ 5% ಮತ ಪಡೆದಿಲ್ಲ. ರಶ್ಯಾದ ಸಂಸತ್ 'ಡ್ಯೂಮಾ'ದಲ್ಲಿ ಪ್ರವೇಶ ಪಡೆಯಬೇಕಾದರೆ ಕನಿಷ್ಠ ಇಷ್ಟು ಮತ ಪಡೆಯಬೇಕು. ಬಹುಶಃ ಮಾಜಿ ಪ್ರಧಾನಿ ಯೆಗೊರ್ ಗೈದರ್‌ರ 'ಡೆಮೊಕ್ರಾಟಿಕ್ ಚಾಯ್ಸ್ ಪಾರ್ಟಿ'(ಪ್ರಜಾಪ್ರಭುತ್ವ ಆಯ್ಕೆ ಪಕ್ಷ), ಅಂಪಿಟೋವ್‌ರ ಕಮ್ಯುನಿಸ್ಟ್

> **1991ರ ಪ್ರತಿಕ್ರಾಂತಿಯ ನಂತರ ತಮ್ಮ ಜೀವನಮಟ್ಟ ತೀವ್ರವಾಗಿ ಹದಗೆಟ್ಟುದನ್ನು ಕಂಡ ರಶ್ಯನ್ ಜನತೆ ತಮ್ಮ ಹಕ್ಕುಗಳು ಇನ್ನಷ್ಟು ಹ್ರಾಸಗೊಳ್ಳದಂತೆ ತಡೆದಿಡುವ, ರಕ್ಷಿಸಿಡುವ ಸಮರದಲ್ಲಿ ಸೇರಿಕೊಂಡಿದ್ದಾರೆ ಎಂಬುದು ಫಲಿತಾಂಶಗಳಿಂದ ಸ್ಪಷ್ಟವಾಗಿದೆ. ಆದರೆ ಯಾವುದೇ ರೀತಿಯಲ್ಲೂ ಇದನ್ನು ರಶ್ಯಾದಲ್ಲಿ ಸಮಾಜವಾದದ ಮರುಸ್ಥಾಪನೆಯೆಂದು ಹೇಳಲಿಕ್ಕಾಗದು. ಸಮಾಜವಾದದ ಸಮಸ್ಯೆಗಳನ್ನು ಬಂಡವಾಳಶಾಹೀ ಔಷಧಿಗಳಿಂದ ಪರಿಹರಿಸಲಾಗದು ಎಂದು ಸಿಪಿಐ(ಎಂ) ತನ್ನ 14ನೇ ಮಹಾಧಿವೇಶನದಲ್ಲಿ ಒತ್ತಿ ಹೇಳಿದ್ದನ್ನು ಇದು ಸಾಬೀತುಗೊಳಿಸಿದೆಯಷ್ಟೇ.**

ಪಕ್ಷ ಹಾಗೂ 'ರಶ್ಯಾದ ಮಹಿಳೆಯರು' ಪಕ್ಷ 5% ಕನಿಷ್ಠ ಮಿತಿ ದಾಟಬಹುದು.

ರಶ್ಯನ್ ಸಂಸತ್ತಿನ ಚುನಾವಣೆ ಒಂದು ಸಂಕೀರ್ಣ ಪ್ರಕ್ರಿಯೆ. ಸಂಸತ್ತಿನ 450 ಸದಸ್ಯರಲ್ಲಿ ಅರ್ಧದಷ್ಟು ಅನುಪಾತಿಕ ಪ್ರಾತಿನಿಧ್ಯದ ವಿಧಾನದಲ್ಲಿ ಆಯ್ಕೆಯಾಗುತ್ತಾರೆ. ಅಂದರೆ ಒಂದು ಪಕ್ಷ ಎಷ್ಟು ಶೇಕಡಾ ಮತ ಗಳಿಸುತ್ತದೋ ಆ ಅನುಪಾತದಲ್ಲಿ ಅದು ಸಂಸತ್ ಸದಸ್ಯರನ್ನು ಹೊಂದುತ್ತದೆ. ಚುನಾವಣೆಯ ಮೊದಲು ಆ ಪಕ್ಷ ಪ್ರಕಟಿಸಿರುವ ಪಟ್ಟಿಯಲ್ಲಿ ಅಷ್ಟು ಸಂಖ್ಯೆಯ ಸದಸ್ಯರು ಆಯ್ಕೆಯಾಗುತ್ತಾರೆ. ಇನ್ನರ್ಧ(ಅಂದರೆ 225) ಸ್ಥಾನಗಳಿಗೆ ನಮ್ಮಲ್ಲಿರುವಂತೆ ಅಭ್ಯರ್ಥಿಗಳಿಗೇ ನೇರ ಮತ ಹಾಕಿ ನಿರ್ದಿಷ್ಟ ಚುನಾವಣಾ ಕ್ಷೇತ್ರಗಳಿಂದ ಚುನಾಯಿಸಲಾಗುತ್ತದೆ.

ವ್ಯವಸ್ಥೆಯೊಳಗೇ ಮಿತಿಗಳನ್ನು ಹೇರಿಟ್ಟರೂ......

ಮೇಲೆ ಕೊಟ್ಟಿರುವ ಅಂಕೆ-ಸಂಖ್ಯೆಗಳು ಮೊದಲರ್ಧ ಸೀಟುಗಳ ಹಂಚಿಕೆಯನ್ನು ತೋರಿಸುತ್ತದೆ(ಅಂದರೆ ಕಮ್ಯುನಿಸ್ಟ್ ಪಕ್ಷದ 23%ಕ್ಕೆ 52 ಸ್ಥಾನಗಳು ಇತ್ಯಾದಿ-ಅನುವಾದಕ). ನೇರ ಚುನಾವಣೆಯ ಫಲಿತಾಂಶಗಳೂ ಇದೇ ರೀತಿಯಿವೆ. ಈ ಲೇಖನ ಬರೆಯುವ ವೇಳೆಗೆ 206 ಸ್ಥಾನಗಳ ಚಿತ್ರ ಸಿಕ್ಕಿದ್ದು ಅವುಗಳಲ್ಲಿ 54 ಸ್ಥಾನಗಳಲ್ಲಿ ಕಮ್ಯುನಿಸ್ಟರು, ಅವರ ಮಿತ್ರರಾದ ಕರ್ಷಕ ಪಕ್ಷ 22 ಸ್ಥಾನಗಳಲ್ಲೂ, 'ರಶ್ಯಾದ ಮಹಿಳೆಯರು' ಪಕ್ಷ 3 ಸ್ಥಾನಗಳಲ್ಲೂ, ಪಕ್ಷೇತರರು 83 ಸ್ಥಾನಗಳಲ್ಲೂ ಮುಂದಿದ್ದರು. ಸರಕಾರ-ಪರ ಪಕ್ಷ ಕೇವಲ 12 ಸ್ಥಾನಗಳಲ್ಲಿ ಮುಂದಿತ್ತು. ಅತಿ ರಾಷ್ಟ್ರೀಯವಾದಿಗಳಿಗೆ ಫಲಿತಾಂಶ ಬಹಳ ಶೋಚನೀಯವಾಗಿತ್ತು. ರಶ್ಯಾದ ಚುನಾವಣೆಗಳ ವ್ಯವಸ್ಥೆಯಲ್ಲಿ ಯಾವುದೇ ಒಂದು ಪಕ್ಷ ಬಹುಮತ ಪಡೆಯುವುದು ಸುಮಾರು ಸಾಧ್ಯವೇ ಆಗದ ರೀತಿಯಲ್ಲಿ ಅದನ್ನು ಉದ್ದೇಶಪೂರ್ವಕವಾಗಿಯೇ ರೂಪಿಸಲಾಗಿದೆ.

ಇದು ವ್ಯವಸ್ಥೆಯೊಳಗೇ ಅಡಕವಾದ ಮಿತಿಯಾದರೆ ಯೆಲ್ಟ್ ಸಿನ್ ಮತ್ತವರ ಸಾಮ್ರಾಜ್ಯಶಾಹಿ ಗುರುಗಳು ಸಂಸತ್ತಿನ ಹಕ್ಕುಗಳನ್ನು ಬಹಳ ಮಟ್ಟಿಗೆ ಮೊಟಕುಗೊಳಿಸಿದ್ದಾರೆ. ಅಧ್ಯಕ್ಷರ ಮೇಲೆ ಕಡಿವಾಣ ಹಾಕಲು, ಹತೋಟಿಯಲ್ಲಿಡಲು ರಶ್ಯಾದ ಸಂಸತ್ತಿಗೆ ಇರುವ ಅಧಿಕಾರ ಅತ್ಯಲ್ಪ. 1993ರಲ್ಲಿ ಯೆಲ್ಟ್ ಸಿನ್ ಸೋವಿಯತ್ ಒಕ್ಕೂಟದ ಸಂವಿಧಾನವನ್ನು ರದ್ದು ಮಾಡಿ ಸಂಸತ್ತನ್ನು ವಿಸರ್ಜಿಸಿದ್ದರು. ಸಂಸತ್ ಸದಸ್ಯರು ಪ್ರತಿಭಟಿಸಿದಾಗ ಟ್ಯಾಂಕುಗಳನ್ನು ಕಳಿಸಿ ಸಂಸತ್ ಭವನದ ಮೇಲೆ ಬಾಂಬು ಮಳೆ ಸುರಿಸಲಾಯಿತು. ನಿಜ, ಇದು "ಪ್ರಜಾಪ್ರಭುತ್ವ"ದ ಹಿತಾಸಕ್ತಿಗಳ ರಕ್ಷಣೆಗಾಗಿ ನಡೆದ ಧಾಳಿ ಎಂದು ಸಾಮ್ರಾಜ್ಯಶಾಹಿ ಮಾಧ್ಯಮಗಳು ತುತ್ತೂರಿ ಊದಿದವು. ನಂತರ ಯೆಲ್ಟ್ ಸಿನ್ ಒಂದು ಹೊಸ ಸಂವಿಧಾನ ಬರೆದು ಹೆಚ್ಚಿನ ಕಾರ್ಯಾಂಗ ಅಧಿಕಾರವನ್ನು ತಾವೇ ಇಟ್ಟುಕೊಂಡರು. ಡಿಸೆಂಬರ್ 1993ರಲ್ಲಿ ಹೊಸ ಚುನಾವಣೆ ನಡೆಸಿದರು.

ಜನ ಹಕ್ಕುಗಳ ರಕ್ಷಣೆಯ ಸಮರಕ್ಕೆ ಧುಮುಕಿದ್ದಾರೆ

1993 ಡಿಸೆಂಬರ್ ಚುನಾವಣೆಗಳಲ್ಲಿ 50% ಜನತೆ ಮತ ಚಲಾಯಿಸಿದರೆ ಈ ಬಾರಿ 62%ಕ್ಕೂ ಹೆಚ್ಚು ಜನ ಮತ ಚಲಾಯಿಸಿದರು.

ಈ ವ್ಯವಸ್ಥೆಯ ಮಿತಿಗಳೇನೇ ಇದ್ದರೂ ಅಲ್ಲೀಗ ಸುಮಾರು "ತ್ರಿಶಂಕು" ಸಂಸತ್ತು ರಚನೆಗೊಂಡರೂ ಈ ಫಲಿತಾಂಶಗಳಂತೂ ಯೆಲ್ಟ್ ಸಿನ್ ಆಳ್ವಿಕೆಗೆ ಶಾಪ ಹಾಕಿರುವ ತೀರ್ಪು. ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಝುಗನೊವ್ ಹೇಳಿರುವಂತೆ "ಸರಕಾರ ಜನಾಭಿಪ್ರಾಯ ಕೇಳಿದೆ, ಅವಿಶ್ವಾಸದ ಮತ ಪಡೆದಿದೆ. ಇಂತಹ ಫಲಿತಾಂಶ ನೋಡಿದ ಮೇಲೆ ಯಾವ ಸರಕಾರವಾದರೂ ರಾಜೀನಾಮೆ ನೀಡಬೇಕು".

1991ರ ಪ್ರತಿಕ್ರಾಂತಿಯ ನಂತರ ತಮ್ಮ ಜೀವನಮಟ್ಟ ತೀವ್ರವಾಗಿ ಹದಗೆಟ್ಟುದನ್ನು ಕಂಡ ರಶ್ಯನ್ ಜನತೆ ತಮ್ಮ ಹಕ್ಕುಗಳು ಇನ್ನಷ್ಟು ಹ್ರಾಸಗೊಳ್ಳದಂತೆ ತಡೆದಿಡುವ, ರಕ್ಷಿಸಿಡುವ ಸಮರದಲ್ಲಿ ಸೇರಿಕೊಂಡಿದ್ದಾರೆ ಎಂಬುದು ಫಲಿತಾಂಶಗಳಿಂದ ಸ್ಪಷ್ಟವಾಗಿದೆ. ಆದರೆ ಯಾವುದೇ ರೀತಿಯಲ್ಲೂ ಇದನ್ನು ರಶ್ಯಾದಲ್ಲಿ ಸಮಾಜವಾದದ ಮರುಸ್ಥಾಪನೆಯೆಂದು ಹೇಳಲಿಕ್ಕಾಗದು. ಸಮಾಜವಾದದ ಸಮಸ್ಯೆಗಳನ್ನು ಬಂಡವಾಳಶಾಹೀ ಔಷಧಿಗಳಿಂದ ಪರಿಹರಿಸಲಾಗದು ಎಂದು ಸಿಪಿಐ(ಎಂ) ತನ್ನ 14ನೇ ಮಹಾಧಿವೇಶನದಲ್ಲಿ ಒತ್ತಿ ಹೇಳಿದ್ದನ್ನು ಇದು ಸಾಬೀತುಗೊಳಿಸಿದೆಯಷ್ಟೇ. ಮಾಜಿ ಸಮಾಜವಾದಿ ದೇಶಗಳಲ್ಲಿ ಬಂಡವಾಳಶಾಹಿಯ ಮರು ಸ್ಥಾಪನೆಯ ಪ್ರಕ್ರಿಯೆ ಎಣಿಸಿದಷ್ಟು ಸುಲಭ ಮತ್ತು ಸರಳವಲ್ಲ. ಜನಗಳು ಶ್ರಮಪಟ್ಟು ಗೆದ್ದುಕೊಂಡ ಹಕ್ಕುಗಳನ್ನು ಸುಲಭವಾಗಿ ಅಳಿಸಿಹಾಕಲು ಸಾಧ್ಯವಿಲ್ಲ ಎಂಬ ಸಿಪಿಐ(ಎಂ) ತಿಳುವಳಿಕೆ ಎಷ್ಟು ನಿಜ ಎಂದೂ ಇದರಿಂದ ಸಾಬೀತಾಗಿದೆ.

ಈ ಫಲಿತಾಂಶಗಳನ್ನು ಇತರ ಪೂರ್ವ ಯುರೋಪಿನ ಮುಖ್ಯವಾಗಿ ಬಲ್ಗೇರಿಯಾ ಮತ್ತು ಪೋಲಂಡಿನ ಚುನಾವಣೆಗಳಲ್ಲಿ ಕಮ್ಯುನಿಸ್ಟರು ನಿರ್ಣಾಯಕ ಗೆಲುವುಗಳ ಹಿನ್ನೆಲೆಯಲ್ಲಿ ಕೂಡಾ ನೋಡಬೇಕು.

ಈ ಎಲ್ಲಾ ದೇಶಗಳಲ್ಲಿ ಸಾಮಾಜಿಕ ಭದ್ರತೆಯ ಭರವಸೆ ನೀಡಿದ್ದ ಸಮಾಜವಾದಿ ಅಂತರ್‌ರಚನೆಯನ್ನು ಕಳಚಿಹಾಕಿದ್ದ, ಹೆಚ್ಚುತ್ತಿರುವ ನಿರುದ್ಯೋಗ, ತೀವ್ರವಾಗಿ ಇಳಿಯುತ್ತಿರುವ ಜೀವನ ಮಟ್ಟ ಮತ್ತು ಹಣದುಬ್ಬರ ಕೋಟ್ಯಾಂತರ ಜನಗಳನ್ನು ಬಡತನ, ದಾರಿದ್ರ್ಯದ ಕೂಪಕ್ಕೆ ತಳ್ಳಿವೆ. "ಮಾರುಕಟ್ಟೆ ಆರ್ಥಿಕ"ದ ಹೆಸರಲ್ಲಿ ಇದೆಲ್ಲಾ ಆಗುತ್ತಾ ಬಂದದ್ದು ದೇಶದ ಬಹಿರಂಗ ಲೂಟಿ ಹಾಗೂ ಜನಸಮೂಹಗಳ ಶೋಷಣೆ ತೀವ್ರಗೊಂಡದ್ದು.

ಸ್ವರ್ಗವಲ್ಲ ನರಕ - ನಾಲ್ಕು ವರ್ಷಗಳ ಅನುಭವ

ಈ ನಾಲ್ಕು ವರ್ಷಗಳಲ್ಲಿ ಬಂಡವಾಳಶಾಹಿ "ಸ್ವರ್ಗ"ದ ಬದಲು ಪಾತಾ ಶಕ್ತಿ(ಸೂಪರ್ ಪವರ್) ಸ್ಥಾನಮಾನ ಹೊಂದಿದ್ದ ತಮ್ಮ ದೇಶ ನಾಟಕೀಯ ರೀತಿಯಲ್ಲಿ ಹೆಚ್ಚೆಂದರೆ ಒಂದು ಮೂರನೇ ಜಗತ್ತಿನ ದೇಶದ ಮಟ್ಟಕ್ಕೆ ಇಳಿದದ್ದನ್ನು ರಶ್ಯಾದ ಜನತೆ ಕಂಡರು. ರಶ್ಯಾದ ಒಟ್ಟು ಆಂತರಿಕ ಉತ್ಪಾದನೆ(GDP)1991ರಲ್ಲಿ 14.3%ರಷ್ಟು, 1992ರಲ್ಲಿ 22%ರಷ್ಟು, 1993ರಲ್ಲಿ ಮತ್ತೆ 15%ರಷ್ಟು ಇಳಿಯಿತು. ಈಗ ರಶ್ಯಾದ 50%ಕ್ಕೂ ಹೆಚ್ಚು ಜನ ಬಡತನ ರೇಖೆಯ ಕೆಳಗಿದ್ದಾರೆಂದು ಅಂದಾಜು ಮಾಡಲಾಗಿದೆ. 1991ರಿಂದ 1994ರ ನಡುವೆ ರಶ್ಯಾದ ಒಟ್ಟು ನಿರಖು(Fixed) ಬಂಡವಾಳ ಹೂಡಿಕೆ 72.5%ರಷ್ಟು ಇಳಿಯಿತು. ಈ ನಾಲ್ಕು ವರ್ಷಗಳಲ್ಲಿ ಹಣದುಬ್ಬರ ಎಷ್ಟು ತೀಕ್ಷ್ಣವಾಗಿತ್ತೆಂದರೆ ಸುಮಾರಾಗಿ ಡಾಲರೇ ವಿನಿಮಯದ ಮಾಧ್ಯಮವಾಗಿ ಬಿಟ್ಟಿದೆ.

ಬಂಡವಾಳಶಾಹಿ ತಮ್ಮ ಸಮಸ್ಯೆಗಳಿಗೆ ಉತ್ತರವಲ್ಲ, ಬದಲಿಗೆ ಇದು ಶೋಷಣೆ ವೈಯಕ್ತಿಕ ಆಧಾರದ ಮೇಲೆ ನಿಂತಿರುವ ಒಂದು ವ್ಯವಸ್ಥೆ, ಇದು ಬಹುಪಾಲು ಜನಸಮೂಹಗಳ ಜೀವನ ಪರಿಸ್ಥಿತಿಗಳನ್ನು ಇನ್ನಷ್ಟು ಹದಗೆಡಿಸಬಹುದಷ್ಟೆ ಎಂದು ಈ ನಾಲ್ಕು ವರ್ಷಗಳಲ್ಲಿ ಜನರಿಗೆ ಮನವರಿಕೆ ಮಾಡಿದೆ.

ಈ ಹಿನ್ನೆಲೆಯಲ್ಲಿ ಈ ಫಲಿತಾಂಶಗಳ ಮಹತ್ವ ಕಾಣುತ್ತದೆ. ಈ ಜನಗಳು ಚುನಾವಣಾ ರಂಗದಲ್ಲಿ ಸಮರಕ್ಕೆ ಧುಮುಕಿದ್ದಾರೆ. ತೀವ್ರ ಕಿರುಕುಳ, ನಿಷೇಧ, ಎಲ್ಲಾ ರೀತಿಯ ದಮನಕ್ಕೊಳಗಾಗಿರುವ ಕಮ್ಯುನಿಸ್ಟ್ ಪಕ್ಷಗಳು ಮತ್ತೆ ಪರಸ್ಪರ ಸೇರಿಕೊಳ್ಳುತ್ತಾ ದುಡಿಯುವ ಜನಗಳೊಂದಿಗೆ ಬಲವಾದ ಸಂಪರ್ಕ ಏರ್ಪಡಿಸಿಕೊಳ್ಳುತ್ತಿವೆ.

ಜೂನ್ 1996ರಲ್ಲಿ ರಶ್ಯನ್ ಅಧ್ಯಕ್ಷೀಯ ಚುನಾವಣೆಗಳು ನಡೆಯಲಿವೆ. ರಶ್ಯಾದ ಸಂಸತ್ತಿಗೆ ಬಹಳ ಮಿತಿಗಳಿದ್ದರೂ ಯೆಲ್ಟ್‌ಸಿನ್ ಧೋರಣೆಗಳನ್ನು ಆಮೂಲಾಗ್ರವಾಗಿ ತಿರಸ್ಕರಿಸಲಾಗಿದೆ ಎಂಬ ಸಂಗತಿಯೇ ರಶ್ಯಾದ ಭವಿಷ್ಯತ್ತಿನ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಕಮ್ಯುನಿಸ್ಟ್ ಪಕ್ಷ ತನ್ನ ಚುನಾವಣಾ ಪ್ರಚಾರದಲ್ಲಿ ಆರ್ಥಿಕದ ಪ್ರಮುಖ ವಲಯಗಳಲ್ಲಿ ಮರುರಾಷ್ಟ್ರೀಕರಣ, ಶಾಂತಿಯುತವಾಗಿ ಸೋವಿಯತ್ ಒಕ್ಕೂಟದ ಮರು ಸ್ಥಾಪನೆ, ಉದ್ಯೋಗ, ವಸತಿ ಇತ್ಯಾದಿ ಸಾಮಾಜಿಕ ಭರವಸೆಗಳ ಮರುಸ್ಥಾಪನೆಯಾಗಬೇಕು ಎಂಬ ಕರೆ ನೀಡಿತ್ತು. ಪ್ರಸ್ತುತ ಫಲಿತಾಂಶಗಳಿಂದ ಇವೆಲ್ಲಾ ಎಷ್ಟರಮಟ್ಟಿಗೆ ಈಡೇರಬಹುದೆಂಬ ಬಗ್ಗೆ ಸಂಶಯವಿದೆ. ಆದರೆ ಜನಗಳ ಹೋರಾಟಗಳಂತೂ ತೀವ್ರಗೊಳ್ಳುತ್ತಿವೆ. □

KRNM/BGS-405 MAG (2) PRB DECR 319-79/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶಕ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು
ಫೋನ್ ನಂ. 2236462

ಇಸ್ಕೋ ಆಧುನೀಕರಣಕ್ಕೆ ಕೇಂದ್ರದ ಹಣ ನಿರಾಕರಣೆ

ಕಾರ್ಮಿಕ ಸಂಘಗಳ ವಿರೋಧ

ಐದು ಕೇಂದ್ರ ಕಾರ್ಮಿಕ ಸಂಘಟನೆಗಳು (ಸಿಐಟಿಯು, ಎಐಟಿಯುಸಿ, ಬಿಎಂಎಸ್, ಹೆಚ್‌ಎಂಎಸ್ ಹಾಗೂ ಇಂಟಕ್) ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ(ಸೇಲ್) ಅಧೀನದಲ್ಲಿರುವ ಇಸ್ಕೋ ಉಕ್ಕು ಕಾರ್ಖಾನೆಯ ಆಧುನೀಕರಣಕ್ಕೆ 1050 ಕೋಟಿ ರೂ. ಕೊಡುವುದು ಬೇಡ ಎಂಬ ಮಂತ್ರಿಗಳ ಸಮಿತಿಯ ನಿರ್ಣಯದ ಬಗ್ಗೆ ಆತಂಕ ವ್ಯಕ್ತಪಡಿಸಿದೆ. ಜನವರಿ 11 ಹಾಗೂ 12ರಂದು ಇಸ್ಕೋದ ಆಧುನೀಕರಣದ ಕಾರ್ಯತಂತ್ರ ರೂಪಿಸಲು ಹಾಗೂ ಈ ಬಗ್ಗೆ ಒಂದು ಸರ್ವ ಸಾಮಾನ್ಯ ತಿಳುವಳಿಕೆಗೆ ಬರಲು ಎರಡನೇ ರಾಷ್ಟ್ರೀಯ ಸಮಾವೇಶ ನಡೆಸುವ ಯೋಜನೆಯ ಬಗ್ಗೆ ಅವು ತಿಳಿಯಪಡಿಸಿವೆ.

SAIL ಆಧುನೀಕರಣಕ್ಕೆ ಭಾರತ ಸರಕಾರ 1050 ಕೋಟಿ ರೂ. ಕೊಟ್ಟರೆ ತಾನೂ ಹಣ ಒದಗಿಸಲು ಸಿದ್ಧವಿದ್ದರೂ ಸರಕಾರ ಈ ನಿರ್ಣಯ ಕೈಗೊಂಡಿದೆ. ಇಸ್ಕೋ ಕಾರ್ಮಿಕರು ಹಾಗೂ ಪಶ್ಚಿಮ ಬಂಗಾಳ ಸರಕಾರ ಕೂಡಾ ತಮ್ಮ ಪಾಲು ಕೊಡಲು ಸಿದ್ಧರಿದ್ದರು.

"ಭಾರತ ಸರಕಾರದ ನಿರ್ಣಯ ಇಸ್ಕೋದ ಖಾಸಗೀಕರಣಕ್ಕೆ ನೀಡಿರುವ ಬಹಿರಂಗ ಆಹ್ವಾನ. ಉಕ್ಕು ಉದ್ದಿಮೆಯ ಎಲ್ಲಾ ಕಾರ್ಮಿಕರೂ ಒಗ್ಗಟ್ಟಿನಿಂದ ಇದನ್ನು ವಿರೋಧಿಸಿದರೂ ಸರಕಾರ ಹೀಗೆ ವರ್ತಿಸಿದೆ. ಇಸ್ಕೋ ಸಂಘಗಳು SAIL ಆಡಳಿತದೊಂದಿಗೆ ಆಧುನೀಕರಣದ ಬಗ್ಗೆ ಒಪ್ಪಂದ ಮಾಡಿಕೊಂಡು ಅದರ ಎಲ್ಲಾ ಅಂಶಗಳನ್ನು ಪಾಲಿಸಿವೆ, ಆದರೆ SAIL ಆಡಳಿತ ವರ್ಗ ಹಾಗೆ ಮಾಡಿಲ್ಲ. ಅಲ್ಲದೆ ಇಸ್ಕೋದ ಎಲ್ಲಾ ಘಟಕಗಳು, ಬರ್ನ್ ಪುರ್ ಘಟಕ ಕೂಡಾ ಶ್ಲಾಘನಾರ್ಹ ಸುಧಾರಣೆ ತೋರಿಸಿವೆ ಎಂದು ಕಾರ್ಮಿಕ ಸಂಘಗಳ ಹೇಳಿಕೆ ತಿಳಿಸಿದೆ.

ಸರಕಾರ ತನ್ನ ನಿರ್ಣಯದ ಮರು ಪರಿಶೀಲನೆ ಮಾಡಿ ಇಸ್ಕೋದ ಆಧುನೀಕರಣಕ್ಕೆ ಅಗತ್ಯ ಹಣ ಒದಗಿಸಬೇಕು ಎಂದು ಸರಕಾರವನ್ನು ಆಗ್ರಹಿಸಿರುವ ಕಾರ್ಮಿಕ ಸಂಘಗಳು ದೇಶಾದ್ಯಂತ ಉಕ್ಕು ಕಾರ್ಮಿಕರು ಇಸ್ಕೋದ ಖಾಸಗೀಕರಣಕ್ಕೆ ಅವಕಾಶ ನೀಡುವುದಿಲ್ಲ ಎಂದಿವೆ.

ಸಂಸತ್ತಿನಲ್ಲಿ ಜವಳಿ ಕಾರ್ಮಿಕರ ಪ್ರತಿಭಟನೆ

ಜವಳಿ ಉದ್ದಿಮೆಯ 8000ಕ್ಕೂ ಹೆಚ್ಚು ಕಾರ್ಮಿಕರು ಡಿಸೆಂಬರ್ 12ರಂದು ಸಂಸತ್ತಿನ ಮುಂದೆ ಬಂಧನಕ್ಕೊಳಗಾದರು. ಇಂಟಕ್, ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್, ಬಿಎಂಎಸ್, ಎನ್‌ಎಲ್‌ಒ, ಯುಟಿಯುಸಿ ಹಾಗೂ ಟಿಯುಸಿಸಿ ಇರುವ ಜಂಟಿ ಕ್ರಿಯಾ ಸಮಿತಿಯ ಕರೆಯ ಮೇರೆಗೆ ಈ ಕಾರ್ಯಕ್ರಮ ನಡೆಯಿತು.

ಈ ಉದ್ದಿಮೆಯ ಮೂರೂ ವಲಯಗಳ ಅಂದರೆ ಸಂಘಟಿತ ಮಿಲ್ಲುಗಳು(NTP, ಖಾಸಗಿ ಹಾಗೂ ಸಹಕಾರೀ ಮಿಲ್ಲುಗಳು), ಕೈಮಗ್ಗ ವಲಯ ಹಾಗೂ ಪವರ್ ಲೂಂ ವಲಯದ ಕಾರ್ಮಿಕರು ಜವಳಿ ಉತ್ಪಾದಿಸುವ ಎಲ್ಲಾ ರಾಜ್ಯಗಳಿಂದ ದಿಲ್ಲಿಗೆ ಬಂದು ಈ ಬೃಹತ್ 'ಜೈಲ್ ಭರೋ' ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮಹಿಳೆಯರೂ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅವರ ಬೇಡಿಕೆಗಳು ಹೀಗಿವೆ:

1. ವಿಶೇಷ ತ್ರಿಪಕ್ಷೀಯ ಸಮಿತಿಯ 9.9.94ರ ಸಭೆಯ ಸರ್ವಾನುಮತದ 8 ಅಂಶಗಳ ಒಪ್ಪಂದ ತಕ್ಷಣ ಎನ್.ಟಿ.ಸಿ. ಗಿರಣಿಗಳ ಆಧುನೀಕರಣ
2. ಖಾಸಗಿ ವಲಯದಲ್ಲಿ ಮುಚ್ಚಿದ 152 ಮಿಲ್ಲುಗಳನ್ನು ತೆರೆದು, ಇದರಿಂದ ಕೆಲಸ ಕಳೆಕೊಂಡ ಎರಡು ಲಕ್ಷ ಕಾರ್ಮಿಕರಿಗೆ ಮತ್ತೆ ಕೆಲಸ ಕೊಡಿಸಬೇಕು. ಖಾಸಗೀ ವಲಯದಲ್ಲಿ ಜವಳಿ ಉದ್ದಿಮೆಯ ರೋಗಗ್ರಸ್ತತೆ ಬಗ್ಗೆ ತ್ರಿಪಕ್ಷೀಯ ಸಮಿತಿಯ ಸಭೆ ಕರೆಯಬೇಕು.
3. ಕೈಮಗ್ಗ ವಲಯಕ್ಕೆ ನೂಲು ಹಾಗೂ ಇತರ ಕಚ್ಚಾ ಸಾಮಗ್ರಿಗಳನ್ನು ಸಬ್ಸಿಡಿ ದರಗಳಲ್ಲಿ ಒದಗಿಸಬೇಕು
4. ಪವರ್ ಲೂಂ ವಲಯದಲ್ಲಿ ಕನಿಷ್ಟ ಕೂಲಿ, ಕಾರ್ಮಿಕ ಶಾಸನಗಳು ಹಾಗೂ ಸಾಮಾಜಿಕ ಭದ್ರತಾ ಕ್ರಮಗಳು
5. ಕೇಂದ್ರ ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚಿಸಿ ಒಂದು ಸಮಗ್ರ ಜವಳಿ ನೀತಿ ರೂಪಿಸಿ ಎಲ್ಲಾ ಮೂರು ವಲಯಗಳ ಸಮತೋಲನದ ಬೆಳವಣಿಗೆಯಾಗುವಂತಾಗಬೇಕು.

ಕಾರ್ಮಿಕ ಸಂಘಗಳ ಜಂಟಿ ನಿಯೋಗವೊಂದು ಜವಳಿ ಮಂತ್ರಿ ಕಮಲ್ ನಾಥ್ ರನ್ನು ಭೇಟಿಯಾಗಿ ಈ ಬೇಡಿಕೆಗಳ ಬಗ್ಗೆ ಒಂದು ಮನವಿ ಪತ್ರ ಸಲ್ಲಿಸಿತು. ಸಿಐಟಿಯುನ ಪಿ.ಕೆ.ಗಂಗೂಲಿ, ಗೋಪಾಲ ಭಟ್ಟಾಚಾರ್ಯ ಹಾಗೂ ವಿ.ಜೆ.ಕೆ.ನಾಯರ್, ಇಂಟಕ್ ನ ಎಸ್.ಎಸ್.ಯಾದವ್ ಮತ್ತು ನಿರ್ಮಲ್ ಘೋಷ್, ಎಐಟಿಯುಸಿಯ ಬಿ.ಡಿ. ಜೋಷಿ, ಹೆಚ್‌ಎಂಎಸ್‌ನ ಎ.ತ್ಯಾಗಿ, ಯುಟಿಯುಸಿಯ ಸುನಿಲ್ ಸೆನ್ ಗುಪ್ತಾ ನಿಯೋಗದಲ್ಲಿದ್ದರು. ಜೀವನ್ ರಾಯ್ ಮತ್ತಿತರ ಮೂವರು ಸಿಪಿಐ(ಎಂ) ಸಂಸತ್ ಸದಸ್ಯರು, ಸಿಪಿಐ, ಆರ್.ಎಸ್.ಪಿ. ಹಾಗೂ ಕಾಂಗ್ರೆಸ್(ಐ)ನ ಒಬ್ಬೊಬ್ಬ ಸಂಸತ್ ಸದಸ್ಯರೂ ಜತೆಯಲ್ಲಿದ್ದರು. ಡಿಸೆಂಬರ್ 12ರಂದು ಸಭೆ ಕರೆಯಲು ಮಂತ್ರಿಗಳು ಒಪ್ಪಿದರು.

ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರ ಹಾಗೂ ಕೆಲವು ಎಂಪಿಗಳ ಭಾಷಣದ ನಂತರ ಸಂಸತ್ತಿನ ಸುತ್ತ ಹಾಕಿದ್ದ ಬೇಲಿಯನ್ನು ಮುರಿಯಲು ಹೊರಟ ಕಾರ್ಮಿಕರನ್ನು ಬಂಧಿಸಲಾಯಿತು. ಕ್ರಿಯಾ ಸಮಿತಿ ಚಳುವಳಿಯನ್ನು ಇನ್ನಷ್ಟು ತೀವ್ರಗೊಳಿಸಲಿದೆ.

ಎಐಕೆಎಸ್‌ಗೆ 60 ವರ್ಷ

ಅಖಿಲಭಾರತ ಕಿಸಾನ್ ಸಭಾ ಸ್ಥಾಪನೆಗೊಂಡು 60 ವರ್ಷ ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ ಒಂದು ರಾಷ್ಟ್ರೀಯ ವಿಚಾರ ಸಂಕಿರಣ ನಡೆಸಲು ಎಐಕೆಎಸ್ ಪದಾಧಿಕಾರಿಗಳ ಸಭೆ ನಿರ್ಧರಿಸಿದೆ. "ಕಾರ್ಮಿಕ ರಂಗದಲ್ಲಿ ಅರವತ್ತು ವರ್ಷಗಳ ಬದಲಾವಣೆ" ಈ ವಿಚಾರ ಸಂಕಿರಣದ ವಿಷಯ. ಇದು ದಿಲ್ಲಿಯಲ್ಲಿ ಆಗಸ್ಟ್ 1996ರಲ್ಲಿ ನಡೆಯುವುದು. ಮುಂದಿನ ಎಪ್ರಿಲ್ 1997ರವರೆಗೆ ವಿವಿಧ ರಾಜ್ಯಗಳಲ್ಲಿ ಇಂತಹ ವಿಚಾರ ಸಂಕಿರಣಗಳು ನಡೆಯುತ್ತವೆ. ಕಿರು ಹೊತ್ತಿಗೆಗಳ ಪ್ರಕಟಣೆಯ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಸಂಸತ್ತಿನೆದುರು ರಸಗೊಬ್ಬರ ಕಾರ್ಮಿಕರ ಪ್ರತಿಭಟನೆ-ಬಂಧನ

ಡಿಸೆಂಬರ್ 13ರಂದು ಸುಮಾರು 1500 ರಸಗೊಬ್ಬರ ಉದ್ದಿಮೆಯ ಕಾರ್ಮಿಕರು ಸಂಸತ್ತಿನೆದುರು ಪ್ರತಿಭಟನೆ ನಡೆಸಿ ಬಂಧನಕ್ಕೊಳಗಾದರು. ಭಾರತ ರಸಗೊಬ್ಬರ ಕಾರ್ಮಿಕ ಒಕ್ಕೂಟಕ್ಕೆ ಸೇರಿದ 21 ಸಂಘಗಳ ಪ್ರತಿನಿಧಿಗಳು ದೇಶದ ವಿವಿಧ ಭಾಗಗಳಿಂದ ಬಂದಿದ್ದರು. ಸಂಸತ್ತಿನೆಡೆಗೆ ಸಾಗುವ ಮೊದಲು ಜಂತರ್ ಮಂತರ್ ಪಾರ್ಕಿನಲ್ಲಿ ಸಭೆ ನಡೆಸಲಾಯಿತು. ನಂತರ ತಾನು ಬೇಡಿಕೆಗಳ ಫಲಕಗಳನ್ನು ಎತ್ತಿ ಹಿಡಿದು ಘೋಷಣೆ ಕೂಗುತ್ತಾ ಅವರು ಸಂಸತ್ತಿನೆಡೆಗೆ ಮೆರವಣಿಗೆ ಹೊರಟರು. ಸಂಸದ್ ಭವನದ ಎದುರು ಪೋಲೀಸ್ ಅಡ್ಡಗಟ್ಟೆಯನ್ನು ಮುರಿದು ಮುಂದೆ ಸಾಗಿದಾಗ ಪೋಲೀಸರು ಅವರನ್ನು ಬಂಧಿಸಿದರು.

ರಾಷ್ಟ್ರೀಯ ಸಮಾವೇಶ

ಇಂದಿನ ಮತಪ್ರದರ್ಶನವಲ್ಲದೆ, ಡಿಸೆಂಬರ್ 12ರಂದು ಒಂದು ರಾಷ್ಟ್ರೀಯ ಸಮಾವೇಶವೂ ನಡೆಯಿತು. ರಸಗೊಬ್ಬರ ಆಮದು ಮಾಡಿ, ಸ್ವಾವಲಂಬನೆಯ ದಾರಿ ತ್ಯಜಿಸುವ ಸರಕಾರದ ಆತ್ಮಹತ್ಯಾಕಾರಿ ನೀತಿಯನ್ನು ಸೋಲಿಸಲು ಹೋರಾಟವನ್ನು ತೀವ್ರಗೊಳಿಸಬೇಕು ಎಂದು ಸಮಾವೇಶ ನಿರ್ಧರಿಸಿತು. ಭಾರತ ರಸಗೊಬ್ಬರ ನಿಗಮ(FCI) ಮತ್ತು ಹಿಂದೂಸ್ತಾನ್ ರಸಗೊಬ್ಬರ ನಿಗಮ(HFC)ದ ಸ್ಥಾವರಗಳನ್ನು ಮತ್ತೆ ನೆಲೆಗೊಳಿಸುವ ಯೋಜನೆಗೆ ಸರಕಾರವೇ ಒಪ್ಪಿಗೆ ನೀಡಿದ್ದರೂ ಅದನ್ನು ಜ್ಯಾರಿಗೊಳಿಸಿಲ್ಲ. ಇದು ಜ್ಯಾರಿಗೊಳಿಸುವಂತೆ ಸರಕಾರದ ಮೇಲೆ ಒತ್ತಡ ತರುವ ದೀರ್ಘ ಸಮರಶೀಲ ಹೋರಾಟ ಆರಂಭಿಸಲು ಸಮಾವೇಶ ನಿರ್ಧರಿಸಿತು. ಈ ಮರುನೆಲೆಗೊಳಿಸುವ ಯೋಜನೆಯಲ್ಲಿ ಗೋರಖ್ ಪುರ್, ಹಾಲ್ದಿಯಾ ಹಾಗೂ ಎಫ್.ಪಿ. ಅಂಡ್ ಎ.ಆರ್.ಡಿ. ಘಟಕಗಳನ್ನು ಸೇರಿಸಬೇಕೆಂದು ಸಮಾವೇಶ ಒತ್ತಾಯಿಸಿದೆ.

ಸಮಾವೇಶದಲ್ಲಿ ಅಂಗೀಕರಿಸಿದ ನಿರ್ಣಯ ಸ್ಥಳೀಯ ಉದ್ದಿಮೆಗಳ ಬಗ್ಗೆ ಸರಕಾರದ ನಕಾರಾತ್ಮಕ ನಿಲುವನ್ನು ಖಂಡಿಸುತ್ತಾ "ಅಮೂಲ್ಯ ವಿದೇಶೀ ವಿನಿಮಯ ವೆಚ್ಚ ಮಾಡಿ ಸರಕಾರ ಸಾವಿರಾರು ಕೋಟಿ ರೂ.ಗಳ ರಸಗೊಬ್ಬರ ಆಮದು ಮಾಡುತ್ತಿದೆ, ಹಣ ಬಹಳವಿರುವ ಸಾರ್ವಜನಿಕ ವಲಯದ ರಸಗೊಬ್ಬರ ಕಂಪನಿಗಳಿಗೆ ಹೊರ ದೇಶಗಳಲ್ಲಿ ಪ್ರತಿಕೂಲಕರ ಶರತ್ತುಗಳೊಂದಿಗೆ ಬೇರೆ ವಿದೇಶೀ ಕಂಪನಿಗಳ ಕಿರಿಯ ಪಾಲುದಾರರಾಗಿ ರಸಗೊಬ್ಬರ ಸ್ಥಾವರಗಳನ್ನು ಹಾಕಲು ಅವಕಾಶ ನೀಡುತ್ತಿದೆ. ಆದರೆ ಒಂದಿಲ್ಲೊಂದು ನೆವ ಮಾಡಿ ದಶಕಗಟ್ಟಲೆಯಿಂದ ನಮ್ಮ ಸ್ಥಾವರಗಳ ಪುನರುಜ್ಜೀವನಕ್ಕೆ ಅಡ್ಡಗಾಲು ಹಾಕುತ್ತಿದೆ" ಎಂದು ಖೇದ ವ್ಯಕ್ತಪಡಿಸಿದೆ.

ಸಮಾವೇಶ ಮತ್ತು ಮತ ಪ್ರದರ್ಶನಗಳಲ್ಲಿ ಹಲವು ಸಂಸತ್ ಸದಸ್ಯರು, ಕಾರ್ಮಿಕ ಮುಖಂಡರು ಮಾತನಾಡಿದರು. ಸಿಪಿಐ(ಎಂ)ನ ಬಾಸುದೇವ ಆಚಾರ್ಯ, ಡಾ.ಅಶೋಕ್ ಮಿತ್ರಾ, ದೀಪಂಕರ್ ಮುಖರ್ಜಿ, ಹನ್ನನ್ ಮೊಲ್ಲಾ, ತರಿತ್ ತೋಪ್ದಾರ್, ಮಹ್ಮದ್ ಸಲೀಂ, ಸಿಪಿಐನ ಚತುರಾನನ್ ಮಿಶ್ರಾ, ಜಲಾಲುದ್ದೀನ್ ಅನ್ಸಾರಿ, ಜನತಾದಳದ ರಾಮವಿಲಾಸ ಪಾಸ್ವಾನ್, ಎಐಟಿಯುಸಿಯ ಎ.ಬಿ.ಬರ್ದನ್, ಸಿಐಟಿಯುನ ಜೀವನ್ ರಾಯ್ ಮಾತನಾಡಿದರು. ಪ್ರಧಾನಮಂತ್ರಿಗಳಿಗೆ ಒಂದು ಮನವಿ ಸಲ್ಲಿಸಿ ಸರಕಾರ ತನ್ನದೇ ಸ್ಥಾವರಗಳ ಪುನರುಜ್ಜೀವನಕ್ಕೆ ಹಾಕಿದ ಯೋಜನೆಗಳನ್ನು ಜ್ಯಾರಿಗೊಳಿಸಲು ಮಧ್ಯಪ್ರವೇಶಿಸಬೇಕೆಂದು ಒತ್ತಾಯಿಸಲಾಯಿತು.

ಕಾಂಗ್ರೆಸ್(ಐ) ಅಸ್ತವ್ಯಸ್ತಗೊಂಡಿದೆ

ಪುಟ 1 ರಿಂದ

ಗಳಲ್ಲಿ ಬಹಶಃ ಅದಕ್ಕೇ ಅರಿವಿಲ್ಲದೆಯೇ ಸರಾಕರ ತಪ್ಪಿತಸ್ಥರನ್ನು ರಕ್ಷಿಸಲು ಧಾವಿಸಿದೆ. ಖಾಸಗಿ ಕಂಪನಿಗಳಿಗೆ ಟೆಲಿಕಾಂ ಟೆಂಡರುಗಳ ಮೌಲ್ಯ ಹತ್ತಾರು-ಸಾವಿರ ಕೋಟಿ ರೂಪಾಯಿಗಳಷ್ಟು. ದೇಶದ ಭದ್ರತೆಯ ಮೇಲೂ ಮಹತ್ವದ ಪರಿಣಾಮ ಬೀರುವ ಟೆಂಡರುಗಳ ವಿಧಾನಗಳು ಹಾಗೂ ಕ್ರಮಗಳನ್ನು ಪರೀಕ್ಷಿಸುವ ಹಕ್ಕು ಸಂಸತ್ತಿಗಿದೆ ಎಂದು ಪಿ.ಬಿ. ನೆನಪಿಸಿದೆ.

ಉದಾರೀಕರಣದ ಧೋರಣೆ ಮತ್ತು ಖಾಸಗೀಕರಣದ ಭರಾಟೆ ಭ್ರಷ್ಟ ಮಂತ್ರಿಗಳಿಗೆ, ವ್ಯಾಪಾರಸ್ಥರಿಗೆ ಮತ್ತು ವಂಚಕ ವ್ಯಕ್ತಿಗಳಿಗೆ ಪೋಷಣೆ ನೀಡುತ್ತಿವೆ. ದೇಶದ ಸಾರ್ವಜನಿಕ ಆಸ್ತಿಯ ಲೂಟಿ ಮಾಡಲು ಬಿಡಲಾಗದು, ತಕ್ಷಣ ಸರಕಾರ ಬೈಲಾದಿಲಾ ಗಣಿಯಂತಹ ಖಾಸಗೀಕರಣದ ವ್ಯವಹಾರಗಳನ್ನು, ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಹಗರಣಕಾರಿ ಮಾರಾಟವನ್ನು ನಿಲ್ಲಿಸಬೇಕು ಎಂದು ಸಿಪಿಐ(ಎಂ)ಪೊಲಿಟ್‌ಬ್ಯೂರೋ ಆಗ್ರಹಪಡಿಸಿದೆ.

ಪೆನ್ಶನ್ ಯೋಜನೆ ಕಾರ್ಮಿಕ-ವಿರೋಧಿ

ಒಂದು ಸುಗ್ರೀವಾಜ್ಞೆ ಮೂಲಕ ಸಾರಿದ ಪೆನ್ಶನ್ ಯೋಜನೆಗೆ ಎಲ್ಲಾ ವಿಭಾಗಗಳ ಕಾರ್ಮಿಕರಿಂದ ಬಲವಾದ ಪ್ರತಿಭಟನೆ ವ್ಯಕ್ತಗೊಂಡಿದೆ. ಇದರಲ್ಲಿ ಸಿಐಟಿಯು ಪ್ರಮುಖ ನೇತೃತ್ವದ ಪಾತ್ರ ವಹಿಸಿದೆ ಎಂದಿರುವ ಪಿ.ಬಿ. ಈ ಯೋಜನೆಯ ಪ್ರಧಾನ ಅಂಶಗಳು ಕಾರ್ಮಿಕ ವರ್ಗಕ್ಕೆ ಕೇಡುಂಟು ಮಾಡುವಂತಹವು. ಡಿಸೆಂಬರ್ 11ರಂದು ಈ ಯೋಜನೆಯ ವಿರುದ್ಧ ಬಲಿಷ್ಠ ಮುಷ್ಕರ ನಡೆಸಿದ ಮುಂಬೈಯ ಕಾರ್ಮಿಕ ವರ್ಗವನ್ನು ಈ ಸಂದರ್ಭದಲ್ಲಿ ಪಿ.ಬಿ. ಅಭಿನಂದಿಸಿದೆ. ಈ ಯೋಜನೆಯಲ್ಲಿ ಪ್ರಮುಖ ಬದಲಾವಣೆ ಮಾಡದೆ ಸರಕಾರ ಈ ಯೋಜನೆಗೆ ಶಾಸನದ ಅಂಗೀಕಾರವನ್ನು ಹೇಗಾದರೂ ದೊರಕಿಸುವ ಪ್ರಯತ್ನ ನಡೆಸಬೇಡಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸರಕಾರಕ್ಕೆ ಕರೆ ನೀಡಿದೆ.

ಜನಗಳ ಆರ್ಥಿಕ ಸಮಸ್ಯೆಗಳು ಉಲ್ಬಣಗೊಳ್ಳುತ್ತಿರುವುದರಿಂದ ಹುಟ್ಟಿಕೊಳ್ಳುತ್ತಿರುವ ಅಸಂತೃಪ್ತಿಯನ್ನು ಬಲಪಂಥೀಯ ಕೋಮುವಾದಿ ಶಕ್ತಿಗಳು ದುರುಪಯೋಗಪಡಿಸಿಕೊಳ್ಳುವ ಪ್ರಯತ್ನ ನಡೆಸುತ್ತಿವೆ. ಏಕಾತ್ಮತಾ ಯಾತ್ರೆಗಳ ನಂತರ ಈಗ ಆರ್.ಎಸ್.ಎಸ್.-ಬಿಜೆಪಿ-ವಿ.ಹೆಚ್.ಪಿ ಕೂಟ ಜನಗಳನ್ನು ಕೋಮು ಆಧಾರದಲ್ಲಿ ವಿಭಜಿಸುವ ವಿಭಾಜಕ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಲೇ ಇದೆ. ಬಿಜೆಪಿಯ ಮುಂಬೈ ಅಧಿವೇಶನ ಅಲ್ಪಸಂಖ್ಯಾತ-ವಿರೋಧಿ ಪ್ರಜ್ಞೆಯನ್ನು ಪೋಷಿಸುವ ಹಿಂದುತ್ವ ವೇದಿಕೆಯ ಎಲ್ಲಾ ಪ್ರಶ್ನೆಗಳ ಬಗ್ಗೆ ಆಲಾಪನೆ ನಡೆಸಿದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಈ ಹಿನ್ನಲೆಯಲ್ಲಿ ಮನೋಹರ್ ಜೋಷಿ ಕುರಿತಾದ ಸುಪ್ರೀಂ ಕೋರ್ಟ್ ತೀರ್ಪು ಬಂದಿದೆ ಎಂದು ಹೇಳಿದೆ.

ಸುಪ್ರೀಂ ಕೋರ್ಟ್ ತೀರ್ಪು ಮರು ವಿಮರ್ಶೆ ಅಗತ್ಯ

ಭ್ರಷ್ಟ ಚುನಾವಣಾ ಆಚರಣೆಗಳಿಗಾಗಿ ಮುಖ್ಯಮಂತ್ರಿಯ ಚುನಾವಣೆಯನ್ನು ರದ್ದು ಮಾಡಿದ್ದನ್ನು ಮೂವರು ನ್ಯಾಯಾಧೀಶರ ಸುಪ್ರೀಂ ಕೋರ್ಟ್ ನ್ಯಾಯಪೀಠ ಬದಿಗೊತ್ತಿ ಹಿಂದುತ್ವದ ಬಳಕೆ, ಅಷ್ಟೇ ಅಲ್ಲ ಒಂದು ಹಿಂದೂರಾಷ್ಟ್ರ ಕಟ್ಟಬೇಕೆನ್ನುವ ಕರೆ 'ಜನತಾ ಪ್ರಾತಿನಿಧ್ಯ ಕಾಯ್ದೆಯ ಪ್ರಕಾರ ಮತದಾರರಿಗೆ ಮಾಡುವ ಒಂದು ಧರ್ಮದ ಹೆಸರಿನ ಮನವಿಯಾಗುವುದಿಲ್ಲ' ಎಂದಿದೆ.

ಈ ತೀರ್ಪಿನಲ್ಲಿ ಒದಗಿಸಿರುವ ವಾದಗಳು ಬಿಜೆಪಿ ಮತ್ತು ಇತರ ಕೋಮುವಾದಿ ಶಕ್ತಿಗಳಿಗೆ ಮತದಾರರಲ್ಲಿ ಕೋಮುವಾದಿ ಭಾವನೆಯನ್ನು ಬಳಸಲು ಹಾಗೂ ಧರ್ಮವನ್ನು ರಾಜಕೀಯದೊಂದಿಗೆ ಬೆರೆಸಲು ಪ್ರೋತ್ಸಾಹ ನೀಡುತ್ತದೆ ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ. ಕಳೆದ ವರ್ಷ ಸುಪ್ರೀಂಕೋರ್ಟಿನ ಒಂಭತ್ತು ನ್ಯಾಯಾಧೀಶರ ಸಂವಿಧಾನ ಪೀಠ ಸ್ಪಷ್ಟವಾಗಿ ಜಾತ್ಯಾತೀತತೆ ಸಂವಿಧಾನದ ಒಂದು ಮೂಲಭೂತ ಅಂಶ, ಆದ್ದರಿಂದ ಧರ್ಮವನ್ನು ಚುನಾವಣಾ ಉದ್ದೇಶಕ್ಕೆ ಬಳಸುವುದು ಕಾನೂನಿಗೆ ವಿರುದ್ಧ ಎಂದಿತ್ತು. ಆದ್ದರಿಂದ ಪ್ರಸ್ತುತ ತೀರ್ಪು ಒಡ್ಡಿರುವ ಪ್ರಶ್ನೆಯನ್ನು ಒಂದು ಇದಕ್ಕಿಂತ ಹಿರಿದಾದ ನ್ಯಾಯಾಪೀಠ ಮರು ವಿಮರ್ಶೆ ಮಾಡುವುದು ಅಗತ್ಯ ಎಂದು ಪೊಲಿಟ್ ಬ್ಯೂರೋ ಭಾವಿಸಿದೆ.

ಅಯೋಧ್ಯಾ ಪ್ರಶ್ನೆ

ಬಾಬ್ರಿ ಮಸೀದಿ ಪ್ರಶ್ನೆ ಮೇಲೆ ಸಂವಿಧಾನದ 143ನೇ ಕಲಮಿನ ಪ್ರಕಾರ ರಾಷ್ಟ್ರಪತಿಗಳ ಕೇಳಿಕೆಯನ್ನು ತಿರಸ್ಕರಿಸಿ ಸುಪ್ರೀಂ ಕೋರ್ಟ್ ವಿವಾದವನ್ನು ನ್ಯಾಯಾಂಗ ಪ್ರಕ್ರಿಯೆಯ ಮೂಲಕ ಪರಿಹರಿಸಬೇಕು ಎಂದು ಹೇಳಿ ವರ್ಷದ ಮೇಲಾಯಿತು ಎಂದು ಗಮನಿಸಿದ ಸಿಪಿಐ(ಎಂ) ಪೊಲಿಟ್ ಬ್ಯೂರೋ ನರಸಿಂಹರಾವ್ ಸರಕಾರ ಇದುವರೆಗೆ ಇತ್ಯರ್ಥವಾಗದೆ ಉಳಿದಿರುವ ವಿವಾದಗಳನ್ನೆಲ್ಲಾ 138(2) ಕಲಮಿನ ಪ್ರಕಾರ ಶೀಘ್ರ ತೀರ್ಪಿಗೆ ಸುಪ್ರೀಂಕೋರ್ಟಿಗೆ ಒಪ್ಪಿಸಿಲ್ಲ ಎಂದಿದೆ. ಕಾಂಗ್ರೆಸ್ ಸರಕಾರ ಕೋಮುವಾದಿ ಒತ್ತಡಗಳಿಗೆ ತಲೆಬಾಗುವ ರಾಜೀ ನಿಲುವನ್ನು ಬಿಟ್ಟು ಈ ವಿವಾದವನ್ನು ನ್ಯಾಯಾಲಯಕ್ಕೆ ಒಪ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಪೊಲಿಟ್ ಬ್ಯೂರೋ ಆಗ್ರಹ ಪಡಿಸಿದೆ.

ದಕ್ಷಿಣ ಏಶ್ಯಾದಲ್ಲಿ ಅಮೇರಿಕಾದ ತಂತ್ರ

ಬ್ರೌನ್ ತಿದ್ದುಪಡಿ ಮೂಲಕ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಪೂರೈಕೆಗೆ ಅವಕಾಶ, ತಾಲಿಬಾನ್ ಶಕ್ತಿಗಳ ಮೂಲಕ ಅಫಘಾನಿಸ್ತಾನದಲ್ಲಿ ಮಧ್ಯಪ್ರವೇಶಿಸುವ ಪಾಕಿಸ್ತಾನದ ಪ್ರಯತ್ನಗಳಿಗೆ ಅಮೇರಿಕಾದ ಬೆಂಬಲ ಮತ್ತು ಒಂದು ಸ್ವತಂತ್ರ ಕಾಶ್ಮೀರ ರಚನೆಗೆ ಅಮೇರಿಕಾದ ಪ್ರಯತ್ನಗಳು ಇವೆಲ್ಲಾ ಗೃಹಮಂತ್ರಿಗಳು ಸಂಸತ್ತಿನಲ್ಲಿ ಅಮೇರಿಕಾದ ವೈರಪೂರ್ಣ ತಂತ್ರಗಳ ಬಗ್ಗೆ ಸಂಸತ್ತಿನಲ್ಲಿ ಸ್ಪಷ್ಟ ಹೇಳಿಕೆ ನೀಡುವಂತೆ ಮಾಡಿವೆ. ಚವ್ಹಾಣರ ಈ ಹೇಳಿಕೆ "ಸಂಪೂರ್ಣ ಅರ್ಥಹೀನ" ಎಂದು ಅಧಿಕೃತ ಅಮೇರಿಕನ್ ವಕ್ತಾರರನೊಬ್ಬ ಸೊಕ್ಕಿನಿಂದ ಹೇಳಿದ್ದಾನೆ. ಈ ಇಡೀ ಘಟನೆ ಅಮೇರಿಕಾವನ್ನು ಅವಲಂಬಿಸುವ ಮೂರ್ಖತನಕ್ಕೆ ಒಂದು ಉದಾಹರಣೆ ಎಂದಿರುವ ಪೊಲಿಟ್ ಬ್ಯೂರೋ ತಕ್ಷಣ ಭಾರತ-ಅಮೇರಿಕಾ ಮಿಲಿಟರಿ ಸರಕಾರ ಒಪ್ಪಂದವನ್ನು ರದ್ದು ಮಾಡಬೇಕೆಂದು ಆಗ್ರಹಿಸಿದೆ.

ಶ್ರೀಲಂಕಾ ತಮಿಳರ ಪ್ರಶ್ನೆ

ಜಾಫ್ನಾ ತ್ಯಜಿಸಬೇಕಾಗಿ ಬಂದಿರುವ ಶ್ರೀಲಂಕಾ ತಮಿಳರ ಕಷ್ಟ-ನಷ್ಟಗಳ ಬಗ್ಗೆ ಪೊಲಿಟ್ ಬ್ಯೂರೋ ತೀವ್ರ ಆತಂಕ ವ್ಯಕ್ತಪಡಿಸಿದೆ. ಶ್ರೀಲಂಕಾ ಪಡೆಗಳು ಜಾಫ್ನಾ ವಶಪಡಿಸಿಕೊಂಡ ನಂತರ ಅಧ್ಯಕ್ಷೆ ಚಂದ್ರಿಕಾ ಕುಮಾರತುಂಗಾ ಎಲ್.ಟಿ.ಟಿ.ಇ. ವೈರತ್ವದ ಚಟುವಟಿಕೆಗಳನ್ನು ನಿಲ್ಲಿಸಿ, ಶಸ್ತ್ರಾಸ್ತ್ರಗಳನ್ನು ಸಾಂಕೇತಿಕವಾಗಿ ಒಪ್ಪಿಸಿ ಒಂದು ನಿರ್ದಿಷ್ಟ ಸಮಯ ಚೌಕಟ್ಟಿನೊಳಗೆ ಒಂದು ಇತ್ಯರ್ಥಕ್ಕೆ ಬರಲು ಮಾತುಕತೆಗೆ ಬರಬೇಕು ಎಂದು ತಮ್ಮ ಆಹ್ವಾನವನ್ನು ಪುನರುಚ್ಚರಿಸಿದ್ದಾರೆ. ಎಲ್.ಟಿ.ಟಿ.ಇ. ಈ ಆಹ್ವಾನವನ್ನು ಸ್ವೀಕರಿಸಿ ಶಾಂತಿ ನೆಲೆಸುವಂತಾಗಬೇಕು. ಒಂದು ಸಂಯುಕ್ತ ಶ್ರೀಲಂಕಾದ ಚೌಕಟ್ಟಿನೊಳಗೆ ತಮಿಳು ಸ್ವಂತಿಕೆ ಕಾಪಾಡುವ ಹಾಗೂ ನೈಜ ಸ್ವಾಯತ್ತತೆ ಪಡೆಯುವ ಒಂದು ಇತ್ಯರ್ಥ ಸಾಧ್ಯ ಎಂದು ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ.

ಕೇಂದ್ರ ಸಮಿತಿ ಸಭೆ ಮದ್ರಾಸಿನಲ್ಲಿ ಜನವರಿ 18-20

ಕೇಂದ್ರ ಸಮಿತಿಯ ಮುಂದಿನ ಸಭೆಯ ಅಜೆಂಡಾವನ್ನು ಪೊಲಿಟ್ ಬ್ಯೂರೋದ ಡಿ. 14-15 ರ ಸಭೆ ಚರ್ಚಿಸಿ ಚುನಾವಣೆಗಳಿಗೆ ಸಂಬಂಧಪಟ್ಟಂತೆ ರಾಜಕೀಯ ಸನ್ನಿವೇಶ ಹಾಗೂ ಚುನಾವಣೆಗಳಿಗೆ ಪಕ್ಷದ ಸಿದ್ಧತೆಯನ್ನು ಕುರಿತು ಚರ್ಚಿಸಬೇಕೆಂದು ನಿರ್ಧರಿಸಲಾಯಿತು. ಕೇಂದ್ರ ಸಮಿತಿಯ ಈ ಸಭೆ ಮದ್ರಾಸಿನಲ್ಲಿ ಜನವರಿ ಜನವರಿ 18ರಿಂದ 20ರವರೆಗೆ ನಡೆಯಲಿದೆ.

ಮಾರ್ಚ್ ಆರಂಭದೊಳಗೆ ಚುನಾವಣೆ ನಡೆಸಿ

ಫೆಬ್ರವರಿ ಅಂತ್ಯ-ಮಾರ್ಚ್ ಆರಂಭದ ಒಳಗೆ ಚುನಾವಣೆ ನಡೆಸಲು ಕಾಂಗ್ರೆಸ್(ಐ) ಸರಕಾರ ಹಿಂದೇಟು ಹಾಕುತ್ತಿರುವುದನ್ನು ಪೊಲಿಟ್‌ಬ್ಯೂರೋ ತೀಕ್ಷ್ಣವಾಗಿ ಟೀಕಿಸಿದೆ. ಎಲ್ಲಾ ಪ್ರಮುಖ ರಾಷ್ಟ್ರೀಯ ಪಕ್ಷಗಳು ಇದನ್ನು ಸೂಚಿಸಿದ್ದವು. ಮಾರ್ಚ್ 10ರೊಳಗೆ ಮತದಾನ ಪೂರೈಸುವುದು ಎಲ್ಲಾ ದೃಷ್ಟಿಯಿಂದಲೂ ಅತ್ಯುತ್ತಮ ಎಂಬ ತನ್ನ ಅಭಿಪ್ರಾಯವನ್ನು ಸಿಪಿಐ(ಎಂ) ಪುನರುಚ್ಚರಿಸುತ್ತದೆ ಎಂದಿರುವ ಪೊಲಿಟ್‌ಬ್ಯೂರೋ ಈ ಅವಧಿಯಲ್ಲಿ ಲೋಕಸಭಾ ಚುನಾವಣೆಗಳು ಹಾಗೂ ಉತ್ತರಪ್ರದೇಶವೂ ಸೇರಿದಂತೆ ವಿಧಾನಸಭಾ ಚುನಾವಣೆಗಳು ಒಟ್ಟಿಗೆ ನಡೆಯಬೇಕು ಎಂದಿದೆ.

ಎಡ ಮತ್ತು ಜಾತ್ಯಾತೀತ ಐಕ್ಯತೆ

ಎಡ ಮತ್ತು ಜಾತ್ಯಾತೀತ ಶಕ್ತಿಗಳ ಒಂದು ವ್ಯಾಪಕ ಐಕ್ಯತೆ ಬೆಸೆಯುವ ಪ್ರಯತ್ನಗಳ ಪರಾಮರ್ಶೆ ನಡೆಸಿದ ಪೊಲಿಟ್‌ಬ್ಯೂರೋ ಜನತಾದಳ ಮುಖಂಡತ್ವ ಮತ್ತು ಮುಲಾಯಂ ಸಿಂಗ್‌ಯಾದವ್‌ರವರ ನಡುವೆ ನಡೆದ ನವಂಬರ್ 27ರ ಸಭೆ ಈ ದಿಕ್ಕಿನಲ್ಲೊಂದು ಮಹತ್ವದ ಹೆಜ್ಜೆ ಎಂದು ಭಾವಿಸಿದೆ. ಆಂಧ್ರಪ್ರದೇಶದಲ್ಲಿ ಎರಡೂ ತೆಲುಗು ದೇಶಂ ಗುಂಪುಗಳು ಒಟ್ಟಿಗೆ ಬಂದು ಕಾಂಗ್ರೆಸ್(ಐ)ನ್ನು ಮುಂಬರುವ ಚುನಾವಣೆಗಳಲ್ಲಿ ಸೋಲಿಸುತ್ತವೆ ಎಂದು ಸಿಪಿಐ(ಎಂ) ಆಶಯವನ್ನೂ ಪೊಲಿಟ್ ಬ್ಯೂರೋ ವ್ಯಕ್ತಪಡಿಸಿದೆ.

ಎಡಪಕ್ಷಗಳ ಐಕ್ಯತೆಯನ್ನು ಬಲಪಡಿಸುವ ಮಹತ್ವವನ್ನು ಒತ್ತಿ ಹೇಳಿರುವ ಪೊಲಿಟ್‌ಬ್ಯೂರೋ ಇದರಿಂದ ಮುಂಬರುವ ಚುನಾವಣೆಗಳಲ್ಲಿ ಒಂದು ಪರಿಣಾಮಕಾರಿ ಹಾಗೂ ಐಕ್ಯ ಮಧ್ಯಪ್ರವೇಶ ಸಾಧ್ಯವಾಗುತ್ತದೆ ಎಂದು ಪೊಲಿಟ್ ಬ್ಯೂರೋ ಹೇಳಿದೆ.